ವಿಜಯಪುರ | ಸಂಪುಟ 02 | ಸಂಚಿಕೆ 235 | ಪುಟ 4 | ₹ 3.00
https://udayarashminews.com
udayarashmi 90088 88340

# ಉದಯ ರಶ್ಮಿ

Udayarashmi Kannada Daily
ಜನಪರ-ಜೀವಪರ
ಕನ್ನಡ ದಿನಪತ್ರಿಕೆ
ಸಂಪಾದಕ : ಇಂದುಶೇಖರ ಮಣೂರ
Editor: Indushekhar Manur
editor.udayarashmi@gmail.com
RNI NO: KARKAN/2023/86203
ಮಂಗಳವಾರ, ನವೆಂಬರ್ 12, 2024



"ವಿಜ್ಞಾನ ಮೇಳಗಳು ಮಕ್ಕಳಲ್ಲಿ ಹುದುಗಿಕೊಂಡಿರುವ ಸೃಜನಾತ್ಮಕ ಶಕ್ತಿಯನ್ನು ಹೊರಗಡೆ ಹಾಕುವಲ್ಲಿ ಹೆಚ್ಚು ಉಪಯುಕ್ತವಾಗಿದೆ. ವಿದ್ಯಾರ್ಥಿಯ ಪ್ರತಿಭೆ ಗುರುತಿಸಿ ಸೂಕ್ತ ಮಾರ್ಗದರ್ಶನ ಮಾಡಿದರೆ ಅವರಿಗೆ ಭವಿಷ್ಯ ರೂಪಿಸಿಕೊಡಲು ಸಹಕಾರಿಯಾಗಲಿದೆ."

■ ಹ.ಮ.ಪೂಜಾರ
ಮಕ್ಕಳ ಹಿರಿಯ ಸಾಹಿತಿ, ಸಿಂದಗಿ

ಜಿಲ್ಲಾಡಳಿತದಿಂದ ಒನಕೆ ಓಬವ್ವ ಜಯಂತಿ ಆಚರಣೆ | ಎಎಸ್ಪಿ ಶಂಕರ ಮಾರಿಹಾಳ ಅಭಿಮತ

## ಒನಕೆ ಓಬವ್ವರ ದಿಟ್ಟತನ ಹಾಗೂ ಧೈರ್ಯ ಯುವ ಪೀಳಿಗೆಗೆ ಮಾದರಿ



■ ಉದಯರಶ್ಮಿ ದಿನಪತ್ರಿಕೆ

ವಿಜಯಪುರ: ಚಿತ್ರದುರ್ಗದ ಕೋಟೆಯ ರಕ್ಷಣೆಗಾಗಿ ತನ್ನ ಪ್ರಾಣವನ್ನೇ ಪಣಕ್ಕಿಟ್ಟು ಹೋರಾಡಿದ ವೀರ ವನಿತೆ ಒನಕೆ ಓಬವ್ವ ಅವರ ಧೈರ್ಯ,ಸಾಹಸ ಹಾಗೂ ಸಮಯ ಪ್ರಜ್ಞೆಯಂತಹ ಆದರ್ಶಮಯ ವಿಚಾರಗಳನ್ನು ಯುವಪೀಳಿಗೆ ಜೀವನದಲ್ಲಿ ಅಳವಡಿಸಿಕೊಳ್ಳುವಂತೆ ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ ಶಂಕರ ಮಾರಿಹಾಳ ಹೇಳಿದರು.

ಸೋಮವಾರ ನಗರದ ಕಂದಗಲ್ಲ ಶ್ರೀ ಹನಮಂತರಾಯ ರಂಗಮಂದಿರದಲ್ಲಿ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಯೋಗದಲ್ಲಿ ವೀರ ವಣನೆ ಒನಕೆ ಓಬವ್ವ ಜಯಂತಿ ಕಾರ್ಯಕ್ರಮದಲ್ಲಿ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು.

ಕೋಟೆ ರಕ್ಷಣೆಗಾಗಿ ತೋರಿದ ಧೈರ್ಯ ಇವರ ಸಾಹಸಮಯ ಚರಿತ್ರೆ ಯುವಪೀಳಿಗೆ ಅರಿಯಬೆಕು. ಇಂತಹ ಮಹನೀಯರ ಜಯಂತಿಗಳು ಆಚರಿಸುವ ಮೂಲಕ ಅವರ ಸಾಹಸಮಯ ಸಾಧನೆ ಸಮಾಜಕ್ಕೆ ತಿಳಿಹೇಳುವ ಉದ್ದೇಶವಾಗಿದೆ ಎಂದು ಹೇಳಿದರು.

ವಿಜಯಪುರ ಉಪ ವಿಭಾಗಾಧಿಕಾರಿ ಗುರುನಾಥ ದಡ್ಡೆ ಮಾತನಾಡಿ, ಶತ್ರು ಸೈನ್ಯವನ್ನು ಹಿಮ್ಮೆಟ್ಟಿಸಿದ ದಿಟ್ಟ ಮಹಿಳೆಯಾಗಿದ್ದರು ಎಂದರು.

### ಮೆರವಣಿಗೆಗೆ ಚಾಲನೆ

**ಬೆಳಿಗ್ಗೆ ನಗರದ ಶ್ರೀ ಸಿದ್ದೇಶ್ವರ ದೇವಸ್ಥಾನದಿಂದ ಆರಂಭಗೊಂಡ ವೀರ ವನಿತೆ ಒನಕೆ ಓಬವ್ವ ಅವರ ಭಾವಚಿತ್ರದ ಮೆರವಣಿಗೆಗೆ ಉಪ ವಿಭಾಗಾಧಿಕಾರಿಗಳಾದ ಗುರುನಾಥ ದಡ್ಡೆ ಅವರು ಚಾಲನೆ ನೀಡಿದರು.**

ಡಾ.ಸುಜಾತಾ ಚಲವಾದಿ ಉಪನ್ಯಾಸ ನೀಡಿದರು. ಸುನೀಲ್ ಉಕ್ಕಲಿ ಮಾತನಾಡಿದರು. ಕಾರ್ಯಕ್ರಮದಲ್ಲಿ ನವರಸ ನೃತ್ಯ ಕಲಾ ತಂಡದಿಂದ ನೃತ್ಯ ರೂಪಕ ಪ್ರಸ್ತುತಪಡಿಸಲಾಯಿತು.

ಈ ಸಂದರ್ಭದಲ್ಲಿ ತಹಶೀಲ್ದಾರ ಪ್ರಶಾಂತ ಚನಗೊಂಡ, ಜಿಲ್ಲಾ ಶಸ್ತ್ರ ಚಿಕಿತ್ಸಕರಾದ ಶಿವಾನಂದ ಮಾಸ್ತಿಹೊಳಿ, ಜಿಲ್ಲಾ ಪಂಚಾಯತ ಕಾರ್ಯದರ್ಶಿ ಶ್ರೀಮತಿ ಅನುಸೂಯಾ ಚಲವಾದಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕ ಸಂತೋಷ ಭೋವಿ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಇಲಾಖೆಯ ಅಧಿಕಾರಿಗಳಾದ ಸುರೇಶ ಹೊಸಮನಿ, ಜಿ.ಎಮ್ ಕೋಲೂರ,ವಿವಿಧಸಂಘಸಂಸ್ಥೆಯಪದಾಧಿಕಾರಿಗಳಾದ ಅಡಿವೆಪ್ಪ ಸಾಲಗಲ್ಲ, ಅಭಿಷೇಕ ಚಕ್ರವರ್ತಿ, ದೇವೇಂದ್ರ ಮೀರೆಕರ, ಭೀಮರಾಯ ಜಿಗಜಿಣಗಿ, ಸೋಮನಗೌಡ ಕಲ್ಲೂರ ಸೇರಿದಂತೆ ಇತರರು ಉಪಸ್ಥಿತರಿದ್ದರು.

## ಸಿಂದಗಿಯಲ್ಲಿ ವ್ಹಿಎಚ್ಪಿ, ಭಜರಂಗದಳ ವತಿಯಿಂದ ಮಠಾಧೀಶರ ನೇತೃತ್ವದಲ್ಲಿ ರೈತರ, ಸಾರ್ವಜನಿಕರ ಜಮೀನು ಉಳಿವಿಗಾಗಿ ಪ್ರತಿಭಟನೆ

# ನ್ಯಾಯ ದೊರಕುವವರೆಗೂ ಹೋರಾಟ: ಮಠಾಧೀಶರ ಗುಡುಗು



■ ಉದಯರಶ್ಮಿ ದಿನಪತ್ರಿಕೆ

ಸಿಂದಗಿ: "ಆಸ್ತಿ ಊರ ಮಗ್ಗಲಕ್ ಒಂದಚೂರ ಹೆಚ್ಚಿಗೆ ಇತ್ತು ಅಂದರೆ ಅದನ್ನು ವಕ್ಫ್ ಹೆಸರಿಗೆ ಮಾಡಿಕೊಳ್ಳುವ ಜೊತೆಗೆ ಮಠಮಾನ್ಯಗಳ ಆಸ್ತಿನೂ ತೆಗೆದುಕೊಳ್ಳುತ್ತಿದ್ದಾರೆ. ಇದೆಲ್ಲವನ್ನು ನೋಡಿದರೆ ನಾಳೆ ನಮ್ಮ ಧರ್ಮದ ಉಳಿವಿಗಾಗಿಯೂ ನಾವು ಹೋರಾಡುವ ಪರಿಸ್ಥಿತಿ ಬರುತ್ತದೆ" ಎಂದು ಯಂಕಂಚಿ ಶ್ರೀಮಠದ ಅಭಿನವ ರುದ್ರಮುನಿ ಶಿವಾಚಾರ್ಯರು ಹೇಳಿದರು.

ಸಿಂದಗಿ ಪಟ್ಟಣದ ಬಸವೇಶ್ವರ ವೃತ್ತದಲ್ಲಿ ವಿಶ್ವ ಹಿಂದೂ ಪರಿಚದ್, ಸಿಂದಗಿ ಬಜರಂಗದಳ ವತಿಯಿಂದ ಮಠಾಧೀಶರ ಹಾಗೂ ವಿವಿಧ ಸಂಘಟನೆಗಳ ನೇತೃತ್ವದಲ್ಲಿ ರೈತರ, ಸಾರ್ವಜನಿಕರ ಜಮೀನು ಉಳಿವಿಗಾಗಿ ಹಮ್ಮಿಕೊಂಡ ಪ್ರತಿಭಟನೆಯಲ್ಲಿ ಭಾಗವಹಿಸಿ ಮಾತನಾಡಿದ ಅವರು, ಭಾರತದ ಸಂವಿಧಾನದ ಪ್ರಕಾರ ಕಾಯ್ದೆ ಜಾರಿಗೆ ಬರಬೇಕು. ಮುಸ್ಲಿಂರಿಗೊಂದು ಬೇರೆ ಕಾನೂನು ಇದು ಸಂವಿಧಾನ ಬಾಹಿರ. ರೈತರ, ಸಾರ್ವಜನಿಕರ ಮನೆ ಮಠದ ಆಸ್ತಿಗಳು ಯಾರದೋ ಪಾಲಾಗುವುದು ಬೇಡ. ಹಾಗೇನಾದರೂ ಆದರೆ ನಾವು ಮಠಾಧೀಶರು ಸುಮ್ಮನಿರುವುದಿಲ್ಲ. ನ್ಯಾಯ ದೊರಕುವವರೆಗೂ ಹೋರಾಟ ಮಾಡುತ್ತೇವೆ ಎಂದು ಎಚ್ಚರಿಕೆ ನೀಡಿದರು.



"ಕೆಲವು ದಿನಗಳ ಹಿಂದೆ ಸಚಿವ ಜಮೀರಅಹ್ಮದ ಖಾನ್ ಅವರು ಮಾಧ್ಯಮದಲ್ಲಿ ಹೇಳಿದ್ದನ್ನು ಕೇಳಿದ್ದೇವೆ. ಜಮೀನುಗಳನ್ನು ಅಲ್ಲಾನ್ ಹೆಸರಲೇ ಮಾಡು ಎಂದು ಅಲ್ಲಾ ನನಗೆ ವಕ್ಫ್ ಬೋರ್ಡಿಗೆ ವರ್ಗಾಯಿಸು ಎಂದು ಹೇಳಿದ್ದಾನೆ ಅದಕ್ಕೆ ನಾನು ಈ ಕೆಲಸ ಮಾಡುತ್ತಿದ್ದೇನೆ ಎಂದು ಹೇಳಿದ್ದರು. ಅಲ್ಲಾ ಎಂದರೆ ಏನು ಎಂಬುದನ್ನು ಅವರಿಗೆ ಕೇಳಬೇಕು. ಏಕೆಂದರೆ ಈ ಭೂಮಂಡಲದಲ್ಲಿ ಭಗವಂತ ಎಲ್ಲರಿಗೂ ಆಸರೆ ನೀಡಿದ್ದಾನೆ."

■ ಡಾ.ಪ್ರಭುಸಾರಂಗದೇವ ಶಿವಾಚಾರ್ಯರು
ಸಾರಂಗಮಠ, ಸಿಂದಗಿ

ಈವೇಳೆಸಾರಂಗಮಠದಡಾ.ಪ್ರಭುಸಾರಂಗದೇವ ಶಿವಾಚಾರ್ಯರು ಮಾತನಾಡಿ, ರಾಜ್ಯದಲ್ಲಿ ಈ ವಿಷಯ ವ್ಯಾಪಕವಾಗಿ ಹರಡಿರುವುದನ್ನು ನೋಡಿದರೆ ಮುಂಬರುವ ದಿನಮಾನಗಳಲ್ಲಿ ಶೋಚನಿಯ ಸ್ಥಿತಿ ಎದುರಾಗಲಿದೆ. ಏಕೆಂದರೆ ರೈತರ, ಸಾರ್ವಜನಿಕರ, ಮಠಮಾನ್ಯ ಹಾಗೂ ದೇವಸ್ಥಾನಗಳ ಜಮೀನುಗಳನ್ನು ಹೇಳದೆ ಕೇಳದೆ ವಕ್ಫ್ ಹೆಸರಿನಿಂದ ನೋಂದಾಯಿಸಿಕೊಂಡಿದ್ದಾರೆ. ಒಬ್ಬರ ಆಸ್ತಿ ದಾನ ಮಾಡಬೇಕಾದರೆ ಆಸ್ತಿಯ ಮಾಲೀಕ ಬಂದು ಬಿಟ್ಟುಕೊಡಬೇಕಾಗುತ್ತದೆ. ಆದರೆ ಇಲ್ಲಿ ಅಂತಹ ಕಾರ್ಯ ಏನೂ ನಡೆದಿಲ್ಲ. ಏಕಾಏಕಿ ವಕ್ಫ್ ಬೋರ್ಡ್ ಹೆಸರಿನಲ್ಲಿ 11ನೆಯ ಕಾಲಂನಲ್ಲಿ ಹೆಸರು ಸೇರ್ಪಡೆಯಾಗಿದ್ದನ್ನು ಖಂಡಿಸುತ್ತೇವೆ. ರೈತರ ಆಸ್ತಿಯನ್ನು ವಕ್ಫ್ ಬೋರ್ಡಿಗೆ ತೆಗೆದುಕೊಳ್ಳುವಂತಹದ್ದು ಇದು ಭಗವಂತನ ಬೋರ್ಡ್ಲ. ರೈತರ ಜಮೀನುಗಳು ವಕ್ಫ್ ಬೋರ್ಡಿಗೆ ತೆಗೆದುಕೊಳ್ಳುತ್ತಿರುವ ಸ್ಥಿತಿ ಶೋಚನಿಯ ಎಂದರು.

ಈ ಮೊದಲು ವಿಶ್ವ ಹಿಂದೂ ಪರಿಷತ್, ಸಿಂದಗಿ ಭಜರಂಗದಳ, ಮಠಾಧೀಶರು ಹಾಗೂ ವಿವಿಧ ಸಂಘಟನೆಗಳ ವತಿಯಿಂದ ಸಾರಂಗಮಠದಿಂದ ಸ್ವಾಮಿ ವಿವೇಕಾನಂದ ವೃತ್ತದ ಮಾರ್ಗವಾಗಿ ಬಸವೇಶ್ವರ ವೃತ್ತದವರೆಗೆ ಪ್ರತಿಭಟನಾ ಮೆರವಣಿಗೆ ನಡೆಯಿತು.

ಪ್ರತಿಭಟನೆಯಲ್ಲಿ ಆಲಮೇಲ ಶ್ರೀಗಳು, ಬೋರಗಿ ಶ್ರೀಗಳು, ಕನ್ನೊಳ್ಳಿ ಶ್ರೀಗಳು, ಕುಮಸಗಿ ಶ್ರೀಗಳು, ವಿರಕ್ತಮಠದ ಶ್ರೀಗಳು, ಅಲ್ಲಾಪೂರ ಶ್ರೀಗಳು, ನಾಗಣಸೂರ ಶ್ರೀಗಳು, ಗೀತಾ ಅಂಗಡಿ, ಶೇಖಕರಗೌಡ ಹರನಾಳ, ಡಾ.ಶರಣಗೌಡ ಬಿರಾದಾರ, ಶ್ರೀಮಂತ ದುದ್ದಗಿ, ಅಶೋಕ ಅಲ್ಲಾಪುರ, ಶ್ರೀಶೈಲಗೌಡ ಬಿರಾದಾರ ಮಾಗಣಗೇರಿ, ಮಲ್ಲು ಸಾವಳಸಂಗ, ಪೀರು ಕೆರೂರ, ಶ್ರೀಕಾಂತ ಬಿಜಾಪುರ, ಸಿದ್ದು ಪೂಜಾರಿ, ಯಲ್ಲು ಇಂಗಳಗಿ, ಶೈಲಜಾ ಸ್ಥಾವರಮಠ, ರಾಜಕುಮಾರ ಭಾಸಗಿ, ಕಾಜು ಬಂಕಲಗಿ, ಅಶೋಕ ನಾರಾಯಣಪುರ, ಸಾಹೇಬಗೌಡ ಅಡವಿ, ಶಿವರಾಜ ಗುತ್ತರಗಿ ಸೇರಿದಂತೆ ವಿವಿಧ ಸಂಘಟನೆಯ ಕಾರ್ಯಕರ್ತರು ಇದ್ದರು.

## ವಿವಿಧ ಬೇಡಿಕೆ ಈಡೇರಿಕೆಗೆ ಆಗ್ರಹಿಸಿ ಡಿಎಸ್ಎಸ್ ಪ್ರತಿಭಟನೆ



■ ಉದಯರಶ್ಮಿ ದಿನಪತ್ರಿಕೆ

ಇಂಡಿ: ಈ ಆಸ್ತಿ ಪತ್ರ, ಕಟ್ಟಡ ಪರವಾನಗಿ, ಹಿಂದುಳಿದ ವಾರ್ಡಗಳಲ್ಲಿ ಸಮರ್ಪಕ ಕುಡಿಯುವ ನೀರು ಪೂರೈಕೆ, ಪ್ರತಿ ತಿಂಗಳ ದಿನಾಂಕ 5 ರ ಒಳಗಾಗಿ ಎಸಿ ಎಸ್ಟಿ ಖಾತೆಗೆ ನಿವ್ವಳ ಲಾಭದ ಹಣವನ್ನು ವರ್ಗಾವಣೆ ಸೇರಿದಂತೆ ವಿವಿಧ ಬೇಡಿಕೆ ಆಗ್ರಹಿಸಿ ಪುರಸಭೆ ಮುಖ್ಯ ಅಧಿಕಾರಿ ಮಹಾಂತೇಶ ಹಂಗರಗಿ ಅವರಿಗೆ ಕರ್ನಾಟಕ ದಲಿತ ಸಂಘರ್ಷ ಸಮಿತಿಯ ತಾಲ್ಲೂಕು ಪದಾಧಿಕಾರಿಗಳು ಮನವಿ ಸಲ್ಲಿಸಿದರು.

ಸೋಮವಾರ ಪಟ್ಟಣದ ಪುರಸಭೆ ಕಾರ್ಯಾಲಯಕ್ಕೆ ಕರ್ನಾಟಕ ದಲಿತ ಸಂಘರ್ಷ ಸಮಿತಿಯ ತಾಲ್ಲೂಕು ಅಧ್ಯಕ್ಷ ಚಂದ್ರಶೇಖರ ಹೊಸಮನಿ ಹಾಗೂ ಪದಾಧಿಕಾರಿಗಳು ಪ್ರತಿಭಟನೆ ನಡೆಸಿ ಮನವಿ ಸಲ್ಲಿಸಿದರು.

ಈ ಸಂದರ್ಭದಲ್ಲಿ ತಾಲ್ಲೂಕು ಅಧ್ಯಕ್ಷ ಚಂದ್ರಶೇಖರ ಹೊಸಮನಿ ಮಾತನಾಡಿ, ಹಿಂದುಳಿದ ವಾರ್ಡ ನಂಬರ್ 16 ರಿಂ 20 ರವರೆಗೆ ಕುಡಿಯುವ ನೀರು ಸಮರ್ಪಕವಾಗಿ ಪೂರೈಸಬೇಕು. ಮಾಹಿತಿ ಹಕ್ಕು ಅಧಿನಿಯಮ ಅಡಿಯಲ್ಲಿ ಸಲ್ಲಿಸಿದ ಅರ್ಜಿಗಳಿಗೆ ದಾಖಲೆ ಒದಗಿಸಬೇಕು. 20.10 ಖಾತೆಗೆ ಸರಕಾರದ ನಿರ್ದೇಶನದಂತೆ ಬಂದ ನಿವ್ವಳ ಲಾಭವನ್ನು ಎಸಿ ಎಸ್ಟಿ ಖಾತೆಗೆ ವರ್ಗಾವಣೆಗೊಳಿಸಬೇಕು. ಪೌರ ಕಾರ್ಮಿಕರಿಗೆ ವಸತಿ ಸೌಲಭ್ಯದಲ್ಲಿ ಆಗುತ್ತಿರುವ ಅನಾನುಕೂಲ ಹಾಗೂ ಪ್ರತಿ ತಿಂಗಳು ವೇತನ ಸರಿಯಾಗಿ ಒದಗಿಸಬೇಕು ಎಂದು ಆಗ್ರಹಿಸಿದರು.

ಈ ಸಂದರ್ಭದಲ್ಲಿ ಅಮರ ಬಾಸುತಕರ, ಚನ್ನಪ್ಪ ನಡಗಡ್ಡಿ, ಪ್ರದೀಪ ಡೊಳ್ಳಿನ, ಅವಿನಾಶ್ ಶಿಂಧೆ, ಕಿರಣ ಕಟ್ಟಿಮನಿ, ಸಂತೋಷ ಕಾಳೆ, ದಯಾನಂದ ಹೊಸಮನಿ, ಸಂಜು ಭತಗುಣಕಿ, ಮಲ್ಲಿಕಾರ್ಜುನ ಹೊಸಮನಿ, ಬಸು ಡೊಳ್ಳಿನ, ವಿಶ್ವನಾಥ ವಾಘಮೋರೆ, ಸದ್ದಾಂ ಮಕಾನದಾರ, ಸಲೀಲ ಭಾಗವಾನ ,ಜಾವೀದ್ ನಾಗೂರ ಸೇರಿದಂತೆ ಇನ್ನೂ ಅನೇಕರು ಉಪಸ್ಥಿತರಿದ್ದರು.

## ದೇಗುಲ ಜೀರ್ಣೋದ್ಧಾರಕ್ಕೆ ರೂ.1.50 ಲಕ್ಷ ಅನುದಾನ



■ ಉದಯರಶ್ಮಿ ದಿನಪತ್ರಿಕೆ

ಸಿಂದಗಿ: ಪಟ್ಟಣದ ವಿದ್ಯಾನಗರದಲ್ಲಿರುವ ಇಷ್ಟಲಿಂಗ ಸ್ವಾಮಿ ದೇವಸ್ಥಾನದ ಜೀರ್ಣೋದ್ಧಾರಕ್ಕಾಗಿ ಸಿಂದಗಿಯ ಶ್ರೀಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ವತಿಯಿಂದ ಮಂಜೂರಾದ 1ಲಕ್ಷದ 50ಸಾವಿರ ರೂ.ಅನುದಾನದ ಡಿಡಿಯನ್ನು ಜಿಲ್ಲಾ ನಿರ್ದೇಶಕ ಸಂತೋಷಕುಮಾರ್ ರೈ ಇಷ್ಟಲಿಂಗ ಸ್ವಾಮಿ ದೇವಸ್ಥಾನದ ಸಮಿತಿ ಸದಸ್ಯರಿಗೆ ವಿತರಣೆ ಮಾಡಿದರು.

ಈ ವೇಳೆ ಕ್ಷೇತ್ರ ಯೋಜನಾಧಿಕಾರಿ ಕೃಷ್ಣಮೂರ್ತಿ, ಮೇಲ್ವಿಚಾರಕ ಸಿದ್ದಪ್ಪ ಚುಳುಕಿ ಸೇರಿದಂತೆ ದೇವಸ್ಥಾನ ಸಮಿತಿಯ ಸದಸ್ಯರು ಹಾಗೂ ಸಾರ್ವಜನಿಕರು ಉಪಸ್ಥಿತರಿದ್ದರು.

## ರೈತರ ಹಾಗೂ ಸಾರ್ವಜನಿಕ ಆಸ್ತಿ ಉಳಿವಿಗಾಗಿ ರಸ್ತಾ ರೋಖೋ

■ ಉದಯರಶ್ಮಿ ದಿನಪತ್ರಿಕೆ



ಬಸವನಬಾಗೇವಾಡಿ: ಪಟ್ಟಣದ ಬಸವೇಶ್ವರ ವೃತ್ತದಲ್ಲಿ ವಿಶ್ವಹಿಂದು ಪರಿಷತ್, ಬಜರಂಗದಳ ನೇತೃತ್ವದಲ್ಲಿ ಸೋಮವಾರ ರೈತರ ಹಾಗೂ ಸಾರ್ವಜನಿಕ ಆಸ್ತಿ ಉಳಿವಿಗಾಗಿ ಸೋಮವಾರ ರಸ್ತಾ ರೋಖೋ ಹಾಗೂ ವಕ್ಫ್ ವಿರೋಧಿಸಿ ಹೋರಾಟ ಜರುಗಿತು.

ಪ್ರತಿಭಟನಾಕಾರರು ಕೆಲ ಹೊತ್ತು ವಕ್ಫ್ ಕಾಯ್ದೆ ವಿರೋಧಿಸಿ ರಾಜ್ಯ ಸರ್ಕಾರದ ಕ್ರಮವನ್ನು ವಿರೋಧಿಸಿದರು.

ಪ್ರತಿಭಟನಾ ಸ್ಥಳಕ್ಕೆ ಆಗಮಿಸಿದ ಶಿರಸ್ತೇದಾರ ಎಂ.ಎಸ್. ಜಾಗೀರದಾರ ಅವರಿಗೆ ಮನವಿ ಸಲ್ಲಿಸಿದರು.

ಪ್ರತಿಭಟನೆ ಉದ್ದೇಶಿಸಿ ಮನಗೂಳಿ ಹಿರೇಮಠದ ಅಭಿನವ ಸಂಗನಬಸವ ಶಿವಾಚಾರ್ಯ ಸ್ವಾಮೀಜಿ ಮಾತನಾಡಿ, ರೈತರು ದಶಕಗಳಿಂದ ಬಿತ್ತಿ ಬೆಳೆಯುತ್ತಿರುವ ಜಮೀನುಗಳನ್ನು, ಮಠ-ಮಂದಿರ, ಶಾಲೆಗಳ ಸ್ವತ್ತುಗಳನ್ನು ವಕ್ಫ್ ಮಂಡಳಿಯ ಆಸ್ತಿಯನ್ನಾಗಿ ಮಾಡಲು ಹೊರಟವರಿಗೆ ತಕ್ಕ ಪಾಠ ಕಲಿಸುವ ಸಾಮರ್ಥ್ಯ ನಮ್ಮ ರೈತ ಬಾಂಧವರಿಗೆ ಹಿಂದು ಸಮಾಜಕ್ಕೆ ಇದೆ. ಸರ್ಕಾರ ರೈತರ ಉತಾರೆಯಲ್ಲಿ ವಕ್ ಆಸ್ತಿ ದಾಖಲಿಸಿ ನೀಡಿದ ನೊಟೀಸ್ ಮರಳಿ ಪಡೆದರೆ ಸಾಲದು ಉತಾರೆ ಪಹಣಿಯ ಕಾಲಂ ನಂ.11 ರಲ್ಲಿರುವ ವಸ್ತಿ ಎಂದು ಬರೆದಿರುವದನ್ನು ಶರತ್ತಬದ್ಧ ದಾಖಲೆಗಳಿಲ್ಲದೇ ಮೊದಲಿನ ಉತಾರಿದಂತೆ ತಿದ್ದುಪಡಿ ಮಾಡುಬೇಕು. ರೈತ ಬಾಂಧವರಿಗೆ ಸರ್ಕಾರ ಯಾವುದೇ ರೀತಿಯಲ್ಲಿ ತೊಂದರೆ ಕೊಡಬಾರದು. ರಾಜ್ಯ ಸರ್ಕಾರ ಈ ನಿಟ್ಟಿನಲ್ಲಿ ಸೂಕ್ತ ಕ್ರಮ ತೆಗೆದುಕೊಳ್ಳಬೇಕೆಂದರು.

ಪ್ರತಿಭಟನೆ ಉದ್ದೇಶಿಸಿ ಮುಖಂಡರಾದ ಸಂಗನಗೌಡ ಚಿಕ್ಕೊಂಡ, ವಿನುತ ಕಲ್ಲೂರ, ಡಾ.ಬಸವರಾಜ ಚವ್ಹಾಣ ಮಾತನಾಡಿದರು.

ಪ್ರತಿಭಟನೆಯಲ್ಲಿ ಪ್ರದೀಪ ಮುಂಜಾನೆ, ವಿವೇಕಾನಂದ ಕಲ್ಯಾಣಶೆಟ್ಟಿ, ಮಹೇಶ ಸಾಲವಾಡಗಿ, ಅಶ್ವಿನಿಕುಮಾರ ಪಟ್ಟಣಶೆಟ್ಟಿ, ಮಲ್ಲನಗೌಡ ಅಥಣಿ, ರಾಹುಲ ಜಗತಾಪ, ಯಮನೂರಿ ಜಮಖಂಡಿ, ಮಣಿಕಂಠ ಕಲ್ಲೂರ, ಭಾಗ್ಯವಂತ ಇಂಗಳೇಶ್ವರ ಅಪ್ಪು ಭೂತನಾಳ, ಬಸವರಾಜ ಬಿಜಾಪುರ, ರಾಜು ಮುಳವಾಡ, ಮಹಾದೇವ ತಳವಾರ, ದಯಾನಂದ ಸಾರವಾಡ ಸೇರಿದಂತೆ ಇತರರು ಭಾಗವಹಿಸಿದ್ದರು.

**ವಕ್ಫ್ ಕಾಯ್ದೆ ವಿರೋಧಿಸಿ ಪ್ರತಿಭಟನೆ | ಸೂಕ್ತ ಕ್ರಮಕ್ಕೆ ಅಭಿನವ ಸಂಗನಬಸವ ಶಿವಾಚಾರ್ಯರ ಆಗ್ರಹ**

## ವಿದ್ಯಾರ್ಥಿಗಳಿಗೆ ಕುತೂಹಲ ಮೂಡಿಸುವ ವಿಜ್ಞಾನ ಮೇಳ :ಕಂಚ್ಯಾಣಿ

■ ಉದಯರಶ್ಮಿ ದಿನಪತ್ರಿಕೆ



ಸಿಂದಗಿ: ವಿದ್ಯಾರ್ಥಿಗಳಲ್ಲಿ ವಿಜ್ಞಾನ ಮತ್ತು ತಂತ್ರಜ್ಞಾನ ವಿಷಯಗಳ ಬಗ್ಗೆ ಕುತೂಹಲ ಮೂಡಿಸುವಲ್ಲಿ ವಿಜ್ಞಾನ ಮೇಳಗಳು ಹೆಚ್ಚು ಪ್ರಯೋಜನಕಾರಿಯಾಗಿವೆ ಎಂದು ಜಿಲ್ಲಾ ಶರಣ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಜಂಬುನಾಥ ಕಂಚಾಣಿ ಹೇಳಿದರು.

ಸಿಂದಗಿ ಪಟ್ಟಣದ ವಿವೇಕ್ ಇಂಟರ್ನ್ಯಾಷನಲ್ ಪಬ್ಲಿಕ್ ಶಾಲೆ ಮತ್ತು ವಿಜಯಪುರ ಜಿಲ್ಲಾ ಮಕ್ಕಳ ಸಾಹಿತ್ಯ ಸಂಗಮ ಇವುಗಳ ಸಹಯೋಗದಲ್ಲಿ ನಡೆದ ವಿಜ್ಞಾನ ಮೇಳದ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿದ ಅವರು, ಮಕ್ಕಳಲ್ಲಿ ವೈಜ್ಞಾನಿಕ ಮನೋಭಾವವನ್ನು ಜಾಗೃತಗೊಳಿಸುವುದು, ಪ್ರಾಯೋಗಿಕ ಕಲಿಕೆ, ಉನ್ನತ ಶಿಕ್ಷಣ ಹಾಗೂ ಸಾಧನೆಗಳತ್ತ ಪ್ರೇರಣೆ ನೀಡುವುದು ಮೇಳದ ಮುಖ್ಯ ಉದ್ದೇಶವಾಗಬೇಕು ಎಂದರು.

ಈ ವೇಳೆ ಮಕ್ಕಳ ಹಿರಿಯ ಸಾಹಿತಿ ರಾಷ್ಟ್ರ ಪ್ರಶಸ್ತಿ ಪುರಸ್ಕೃತ ಹ.ಮ.ಪೂಜಾರ ಉದ್ಘಾಟಿಸಿ ಮಾತನಾಡಿ, ವಿಜ್ಞಾನ ಮೇಳಗಳು ಮಕ್ಕಳಲ್ಲಿ ಹುದುಗಿಕೊಂಡಿರುವ ಸೃಜನಾತ್ಮಕ ಶಕ್ತಿಯನ್ನು ಹೊರಗಡೆ ಹಾಕುವಲ್ಲಿ ಹೆಚ್ಚು ಉಪಯುಕ್ತವಾಗಿದೆ. ಪ್ರತಿಯೊಬ್ಬ ವಿದ್ಯಾರ್ಥಿಯಲ್ಲೂ ಪ್ರತಿಭೆ ಇರುತ್ತದೆ ಅದನ್ನು ಗುರುತಿಸಿ ಸೂಕ್ತ ಮಾರ್ಗದರ್ಶನ ಮಾಡಿದರೆ ಅವರಿಗೆ ಭವಿಷ್ಯ ರೂಪಿಸಿಕೊಡಲು ಸಹಕಾರಿಯಾಗಲಿದೆ ಶಾಲಾ ಕಾಲೇಜುಗಳು ಆ ನಿಟ್ಟಿನಲ್ಲಿ ಪ್ರಯತ್ನ ಮಾಡಿದ್ದರೆ ಮಕ್ಕಳ ಭವಿಷ್ಯವನ್ನು ರೂಪಿಸಬಹುದಾಗಿದೆ ಎಂದರು.

ಸಂಸ್ಥೆಯ ಮಾರ್ಗದರ್ಶಕ ಪಟ್ಟಣದ ಎಚ್.ಜಿ.ಪಪೂ ಕಾಲೇಜಿನ ಪ್ರಾಚಾರ್ಯಎ.ಆರ್. ಹೆಗ್ಗನದೊಡ್ಡಿ ಪ್ರಾಸ್ತಾವಿಕವಾಗಿ ಮಾತನಾಡಿದರು. ಸಂಸ್ಥೆಯ ಅಧ್ಯಕ್ಷೆ ನೀಲಮ್ಮ ಹೆಗ್ಗನದೊಡ್ಡಿ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ಶಾಲೆಯ ಪ್ರಾಚಾರ್ಯ ಶಾನಿಮೋಲ್ ರಾಬಿನ್ ಇದ್ದರು.

ಕಾರ್ಯಕ್ರಮದಲ್ಲಿ ಶಾಲೆಯ ಶಿಕ್ಷಕ ರಾಬಿನ್, ಶಿವಕುಮಾರ ಶಿವಶಂಪಿಗೇರ ಸೇರಿದಂತೆ ಪಾಲಕರು, ವಿವಿಧ ಶಾಲಾ ಮಕ್ಕಳು, ಶಿಕ್ಷಕರು ಹಾಜರಿದ್ದರು.

**ಸಿಂದಗಿಯಲ್ಲಿ ವಿಜ್ಞಾನ ಮೇಳ ಕಾರ್ಯಕ್ರಮ ಉದ್ಘಾಟಿಸಿದ ಮಕ್ಕಳ ಹಿರಿಯ ಸಾಹಿತಿ ಹ. ಮ. ಪೂಜಾರ**

### ಗೌರವ ಸನ್ಮಾನ

ಇದೇ ಸಂದರ್ಭದಲ್ಲಿ ಧಾರವಾಡದ ಕರ್ನಾಟಕ ವಿದ್ಯಾವರ್ಧಕ ಸಂಘದವರು ನೀಡಿದ ಧರೆಗೆ ದೊಡ್ಡವರು ಪ್ರಶಸ್ತಿಗೆ ಭಾಜನರಾದ ಹ.ಮ.ಪೂಜಾರ ಮತ್ತು ಜಂಬುನಾಥ ಕಂಚಾಣಿ ಅವರಿಗೆ ಜಿಲ್ಲಾ ಮಕ್ಕಳ ಸಾಹಿತ್ಯ ಸಂಗಮದ ಅಧ್ಯಕ್ಷ ಎ.ಆರ್ ಹೆಗ್ಗನದೊಡ್ಡಿ ಗೌರವಿಸಿ, ಸನ್ಮಾನಿಸಿದರು.

## ಪ್ರತಿಯೊಬ್ಬರು ರೋಗ ನಿರೋಧಕ ಶಕ್ತಿ ಕಾಪಾಡಿಕೊಳ್ಳುವುದು ಅಗತ್ಯ



ಕಲಬುರಗಿ: ದೈಹಿಕ, ಮಾನಸಿಕ ಆರೋಗ್ಯವನ್ನು ಕಾಪಾಡಿಕೊಳ್ಳಬೇಕು. ಸೂಕ್ತ ಸಮಯಕ್ಕೆ ಊಟ, ನಿದ್ರೆ, ಸಮತೋಲಿತ ಆಹಾರದ ಸೇವನೆ ಮಾಡಬೇಕು. ವ್ಯಾಯಾಮ, ಯೋಗ, ಸತ್ಸಂಗ ದಿನನಿತ್ಯದ ಬದುಕಿನಲ್ಲಿ ಅಳವಡಿಸಿಕೊಳ್ಳಬೇಕು. ಆರೋಗ್ಯಕರ ಜೀವನಶೈಲಿಯನ್ನು ಅಳವಡಿಸಿಕೊಳ್ಳುವುದರಿಂದ ರೋಗ ನಿರೋಧಕ ಶಕ್ತ ಹೆಚ್ಚಳವಾಗುತ್ತದೆ ಎಂದು ಕುಟುಂಬವೈದ್ಯಡಾ.ವಿ.ಬಿ.ಮಠಪತಿಅಭಿಪ್ರಾಯಪಟ್ಟರು.

ನಗರದ ಹುಮನಾಬಾದ ರಿಂಗ್ ರಸ್ತೆಯ ನಿಜಾಮಪುರನಲ್ಲಿನ 'ಮಠಪತಿ ಕ್ಲಿನಿಕ್'ನಲ್ಲಿ 'ಬಸವೇಶ್ವರ ಸಮಾಜ ಸೇವಾ ಬಳಗ'ದ ವತಿಯಿಂದ ಜರುಗಿದ 'ವಿಶ್ವ ರೋಗ ನಿರೋಧಕ ದಿನಾಚರಣೆ'ಯ ಕಾರ್ಯಕ್ರಮದಲ್ಲಿ ಮಾತನಾಡುತ್ತಿದ್ದರು. ಹಲವಾರು ಸಾಂಕ್ರಾಮಿಕರೋಗಗಳಿಂದ ಲಸಿಕೆಗಳ ಕುರಿತು ಜನಸಾಮಾನ್ಯರಲ್ಲಿ ಜಾಗೃತಿ ಮೂಡಿಸುವ ಉದ್ದೇಶದಿಂದ ಪ್ರತಿವರ್ಷ ನ.10ರಂದು ಈ ದಿನವನ್ನು ಆಚರಿಸಲಾಗುತ್ತದೆ ಎಂದರು.ಕಾರ್ಯಕ್ರಮದಲ್ಲಿ ಬಳಗದ ಅಧ್ಯಕ್ಷ ಹಾಗೂ ಉಪನ್ಯಾಸಕ ಎಚ್.ಬಿ.ಪಾಟೀಲ, ಸಮಾಜ ಸೇವಕ ಶಿವಯೋಗೆಪ್ಪಾ ಎಸ್.ಬಿರಾದಾರ, ಪ್ರಮುಖರಾದ ಯುಸುಫ್ ಅಲಿ, ರಿಯಾಜ್ ಶೇಖ್, ಇರ್ಫಾನ್ ಅಲಿ, ಆಶೀಫ್ ಶೇಖ್ ಸೇರಿದಂತೆ ಬಡಾವಣೆಯ ನಾಗರಿಕರು ಭಾಗವಹಿಸದ್ದರು.

## ಹಿರಿಯ ಪತ್ರಕರ್ತ ರಾಮಕೃಷ್ಣ ಬಡಶೇಷಿ ಅವರಿಗೆ ಸನ್ಮಾನ



ಕಲಬುರಗಿ:ಪ್ರಸಕ್ತ ಸಾಲಿನ ರಾಜ್ಯೋತ್ಸವ ಪ್ರಶಸ್ತಿಗೆ ಭಾಜನರಾದ ಹಿರಿಯ ಪತ್ರಕರ್ತ ರಾಮಕೃಷ್ಣ ಬಡಶೇಷಿ ಅವರಿಗೆ ಬಸವೇಶ್ವರ ಸಮಾಜ ಸೇವಾ ಬಳಗದ ವತಿಯಿಂದ ಇಂದು ಕಲಬುರಗಿ ನಗರದ ಗಾಜಿಪುರನಲ್ಲಿ ಅವರಿಗೆ ಭಾನುವಾರ ಗೃಹ ಸನ್ಮಾನದಲ್ಲಿ ಅಭಿನಂದಿಸಲಾಯಿತು.

ಬಳಗದ ಗೌರವ ಸಲಹೆಗಾರ ಹಾಗೂ ಜನಪರ ಹೋರಾಟಗಾರ ಡಾ.ಲಕ್ಷ್ಮಣ ದಸ್ತಿ, ಅಧ್ಯಕ್ಷ ಎಚ್.ಬಿ.ಪಾಟೀಲ, ಸದಸ್ಯರಾದ ಶಿವಯೋಗೆಪ್ಪಾ ಎಸ್. ಬಿರಾದಾರ, ಅಸ್ಲಾಂ ಶೇಖ್, ಮಹಾದೇವಪ್ಪ ಎಚ್.ಮಾಲಿಬಿರಾದಾರ ಹಾಗೂ ಬಡಶೇಷಿ ಕುಟುಂಬಸ್ಥರು ಭಾಗವಹಿಸಿದ್ದರು.

## ಮೆಥೋಡಿಸ್ಟ್ ಚರ್ಚಿನಲ್ಲಿ ಸುಗ್ಗಿ ಹಬ್ಬ ಆಚರಣೆ



ಕಲಬುರಗಿ: ನಗರದ ಪ್ರಸಿದ್ಧ ಕ್ರೈಸ್ಟ್ ಮೆಥೋಡಿಸ್ಟ್ ಚರ್ಚಿನಲ್ಲಿ ಕೃತಜ್ಞತಾ ಸ್ತೋತ್ರಾರ್ಪಣೆ ಹಬ್ಬವಾದ ಸುಗ್ಗಿ ಹಬ್ಬವನ್ನು ಅದ್ದೂರಿಯಾಗಿ ಆಚರಣೆ ಮಾಡಲಾಯಿತು.

ನಗರದ ಪ್ರಸಿದ್ಧ ವಿಜಯ ವಿದ್ಯಾಲಯ ಬಳಿ ಇರುವ ಕ್ರೈಸ್ಟ್ ಮೆಥೋಡಿಸ್ಟ್ ಚರ್ಚಿನಲ್ಲಿ ಸಭಾ ಪಾಲಕರಾದ ಫಾಸ್ಟರ್ ಡಿಸೋಜ ಥಾಮಾಸ್ ಅವರ ನೇತೃತ್ವದಲ್ಲಿ ಕೃತಜ್ಞತಾ ಸ್ತೋತ್ರಾರ್ಪಣೆ ಹಬ್ಬವಾದ ಸುಗ್ಗಿ ಹಬ್ಬವನ್ನು ವಿಜೃಂಭಣೆಯಿಂದ ಆಚರಣೆ ಮಾಡಲಾಯಿತು. ಕ್ರೈಸ್ತ ಸಮುದಾಯದ ಬಾಂಧವರು, ಮಹಿಳೆಯರು, ಮಕ್ಕಳು ತಮ್ಮ ತಮ್ಮ ಮನೆಗಳಿಂದ ಸಸ್ಯಹಾರಿ ಹಾಗೂ ಶಾಖಾಹಾರಿ ಅಡುಗೆ ತಿಂಡಿ ತಿನಿಸುಗಳನ್ನು ತಯಾರಿಸಿಕೊಂಡು ಬಂದು ಮಾರಾಟ ಮಾಡಿದರು. ಇನ್ನು ಸುಗ್ಗಿ ಹಬ್ಬದಲ್ಲಿ ಭಾಗವಹಿಸಿದ್ದ ಸಾರ್ವಜನಿಕರು ತಮಗಿಷ್ಟವಾದ ಖಾದ್ಯಗಳನ್ನು ಖರೀದಿಸುವ ಮೂಲಕ ದೇವರ ಕೃಪೆಗೆ ಪಾತ್ರರಾದರು.

ಈ ಸಂಧರ್ಭದಲ್ಲಿ ಚರ್ಚಿನ ಪೀಸ್ ಅಂಡ್ ಡಿಸಿಪ್ಲೇನ್ ಕಮಿಟಿ ಅಧ್ಯಕ್ಷರಾದ ಜ್ಞಾನಮಿತ್ರ ಸಾಮೂವೇಲ್, ಸುಗ್ಗಿ ಹಬ್ಬ ಅಧ್ಯಕ್ಷರಾದ ಸುನಂದ ಜೋಕೂರ್, ಜೆಡಸನ್ ಜಾನ್, ವಿಜಯಕುಮಾರ್, ಯಶವಂತ ಮೂಡಲಗಿ, ಜಾನವೆಸ್ಲಿ, ಸಂಧ್ಯಾ ರಾಜ್ ಸ್ಯಾಮ್ಯುಯೆಲ್ ಸೇರಿದಂತೆ ಇತರರು ಉಪಸ್ಥಿತರಿದ್ದರು.

## ಮಾಧವ ಗೋಶಾಲೆಯಲ್ಲಿ ಗೋಪಾಷ್ಟಮಿ



ಕಲಬುರಗಿ: ಮಂದಹಾಸ ಶಿಕ್ಷಣ ಸಂಸ್ಥೆ ಹಾಗು ಶ್ರೀ ಮಾಧವ ಗೋಶಾಲೆಯ ಸಹಯೋಗದೊಂದಿಗೆ ಗೋಶಾಲೆಯ ಪರಿಸರದಲ್ಲಿ ಗೋಪಾಷ್ಟಮಿ ಆಚರಿಸಲಾಯಿತು. ಶ್ರೀ ಕೃಷ್ಣ ಪರಮಾತ್ಮ ದನ ಮೇಯಿಸಿಕೊಂಡು ಬರುವುದನ್ನು ಆರಂಭಿಸಿದ ದಿನ ಗೋಪಾಷ್ಟಮಿ. ಬೆಳಿಗ್ಗೆ ಗೋಸೇವಕರು ಗೋವುಗಳನ್ನು ಮೇಯಿಸಿಕೊಂಡು ಬಂದರು. ಗೋಶಾಲೆಯ ಪರಿಸರದಲ್ಲಿ ಸಗಣಿಯಿಂದ ಸಾರಣೆ ಮಾಡಿ ರಂಗೋಲಿ ಬಿಡಿಸಲಾಯಿತು. ಗೋವಿನ ಕೊಟ್ಟಿಗೆ ಹಾಗು ಕೋಣೆಗಳನ್ನು ಹೂವು, ಮಾವಿನ ತೋರಣಗಳಿಂದ ಅಲಂಕರಿಸಲಾಯಿತು.

ಸಂಜೆ ಗೋವಿನ ಸಗಣಿಯಿಂದ ಮಾಡಿದ ಹಣತೆಗಳನ್ನು ಬೆಳಗಿ ಎಲ್ಲಾ ಗೋಸೇವಕರು ವತ್ಸ ಸಹಿತ ಗೋಮಾತೆಗೆ ಪೂಜೆ ಸಲ್ಲಿಸಿ, ಗೋಗ್ರಾಸ ಅರ್ಪಿಸಿದರು.

ಶಿವರಾಜಕುಮಾರ ಹಳ್ಳಿ, ಪ್ರೀತಲ ಕುಲಕರ್ಣಿ, ರಾಘವೇಂದ್ರ ಗುತ್ತೇದಾರ, ಚೇತನ ಪಾಟೀಲ, ತರುಣ ಶಹಾಪುರ, ಅಂಕುಶ, ಅಭಿಶೇಕ ಪೂಜಾರಿ, ಸುರೇಶ ಕಗ್ಗನಮಡಿ, ರೇವಣಸಿದ್ಧಪ್ಪ ಪಾಟೀಲ ಬೋಳೇವಾಡ, ಶಿವಪುತ್ರ ಹಾಗು ಇತರರು ಉಪಸ್ಥಿತರಿದ್ದರು.

## ಅಪ್ಪನ ಗುಡಿ ದರ್ಗಾ ಮಾಡಲು ಯತ್ನ: ಮಣಿಕಂಠ ಆರೋಪ ಲಿಂಗಾಯತರ ಮಧ್ಯೆ ಒಡಕು ಮೋದಿ ಖಂಡನೆ



ಕಲಬುರಗಿ : ಕಲಬುರಗಿಯ ಆರಾಧ್ಯ ದೈವಶ್ರೀಶರಣಬಸವೇಶ್ವರದೇವಾಲಯವನ್ನು ಜಿಲ್ಲಾ ಉಸ್ತುವಾರಿ ಸಚಿವ ಪ್ರಿಯಾಂಕ್ ಖರ್ಗೆ ಮತ ಬ್ಯಾಂಕ್ ರಾಜಕಾರಣಕ್ಕಾಗಿ ದರ್ಗಾ ಮಾಡಲು ಹೊರಟಿದ್ದಾರೆ ಎಂದು ಬಿಜೆಪಿ ಮುಖಂಡ ಮಣಿಕಂಠ ರಾಠೋಡ್ ಹಬ್ಬಿಸಿದ್ದಾರೆ ಎನ್ನಲಾಗುತ್ತಿರುವ ವದಂತಿಗೆ ಅಖಿಲ ಭಾರತ ವೀರಶೈವ-ಲಿಂಗಾಯತ ಮಹಾಸಭಾ ಜಿಲ್ಲಾಧ್ಯಕ್ಷ ಶರಣಕುಮಾರ್ ಮೋದಿ ಕಿಡಿಕಾರಿದ್ದಾರೆ.

ಈ ಕುರಿತು ಹೇಳಿಕೆ ಬಿಡುಗಡೆ ಮಾಡಿರುವ ಅವರು, ಕಲಬುರಗಿಯ ಅಪ್ಪಾ ಗುಡಿಯನ್ನು ದರ್ಗಾ ಮಾಡಲು ಯತ್ನಿಸುತ್ತಿರುವ ಸಚಿವ ಪ್ರಿಯಾಂಕ್ ಖರ್ಗೆ ಪ್ರಯತ್ನ ಕೈಗೂಡದಂತೆ ಲಿಂಗಾಯತರು ಎಚ್ಚರ ವಹಿಸಬೇಕು ಎಂದು ಮಣಿಕಂಠ ರಾಠೋಡ್ ಫೋಟೋ ಹೊಂದಿರುವ ಒಂದು ಪೋಸ್ಟ್ ಸಾಮಾಜಿಕ ಜಾಲತಾಣದಲ್ಲಿ ಹರಿದಾಡುತ್ತಿದೆ. ಆ ಮೂಲಕ ಪ್ರಜ್ಞಾವಂತ ಲಿಂಗಾಯತ ಸಮುದಾಯದಲ್ಲಿ ಒಡಕು ಮೂಡಿಸುವ ಯತ್ನ ನಡೆಸಲಾಗುತ್ತಿದೆ. ಮೇಲಾಗಿ ಇಂಥದ್ದೊಂದು ಸುಳ್ಳು ವದಂತಿಯ ಮೂಲಕ ಸಚಿವ ಪ್ರಿಯಾಂಕ್ ಖರ್ಗೆಯವರ ವರ್ಚಸ್ಸಿಗೆ ಧಕ್ಕೆ ತರುವ ಯತ್ನವನ್ನು ಮಣಿಕಂಠ ಸೇರಿದಂತೆ ಇತರ ಬಿಜೆಪಿ ಮುಖಂಡರು ಮಾಡುತ್ತಿದ್ದಾರೆ. ಲಿಂಗಾಯತ ಸಮಾಜವನ್ನು ಒಡೆಯುವ ಯತ್ನಕ್ಕೆ ಯಾರಾದರೂ ಮುಂದಾದರೆ ಸಮಾಜ ತಕ್ಕ ಪಾಠ ಕಲಿಸಲಿದೆ ಎಂದು ಅವರು ಎಚ್ಚರಿಕೆ ನೀಡಿದ್ದಾರೆ.

ವಕ್ಫ್ ಮಂಡಳಿ ವಿರುದ್ಧ ಬಿಜೆಪಿ ರಾಜ್ಯಾದ್ಯಂತ ಪ್ರತಿಭಟನೆ ನಡೆಸುತ್ತಿರುವ ಈ ಹೊತ್ತಿನಲ್ಲಿ ಕಲಬುರಗಿ ಜಿಲ್ಲೆಯ ಬಿಜೆಪಿ ಮುಖಂಡರು ವಕ್ಫ್ ಮಂಡಳಿ ಹಾಗೂ ಸಚಿವ ಪ್ರಿಯಾಂಕ್ ಖರ್ಗೆಯವರನ್ನು ಏಕಕಾಲಕ್ಕೆ ಟಾರ್ಗೆಟ್ ಮಾಡಲು ಇಲ್ಲಸಲ್ಲದ ವದಂತಿಗಳನ್ನು ಹಬ್ಬಿಸುತ್ತಿದ್ದಾರೆ. ಇಂತಹ ತಳಬುಡವಿಲ್ಲದ ವದಂತಿಗಳ ಕುರಿತು ಯಾರೂ ತಲೆ ಕೆಡಿಸಿಕೊಳ್ಳಬಾರದು ಎಂದು ಮೋದಿ ಮನವಿ ಮಾಡಿದ್ದಾರೆ. ಸಚಿವ ಪ್ರಿಯಾಂಕ್ ಖರ್ಗೆ ಕಲಬುರಗಿಯ ಶ್ರೀ ಶರಣಬಸವೇಶ್ವರ ದೇವಾಲಯವನ್ನು ದರ್ಗಾ ಮಾಡುವ ಮೂಲಕ ಎಡಪಂಥೀಯ ವಿಚಾರಧಾರೆ ಹೇರುವ ಯತ್ನ ನಡೆಸುತ್ತಿದ್ದಾರೆ ಎಂಬ ಮಣಿಕಂಠ ರಾಠೋಡ್ ಪೋಸ್ಟಿಗೆ ಶರಣು ಮೋದಿ ತೀವ್ರ ವಿರೋಧ ವ್ಯಕ್ತಪಡಿಸಿದ್ದಾರೆ.

ಜಿಲ್ಲಾ ಉಸ್ತುವಾರಿ ಸಚಿವ ಪ್ರಿಯಾಂಕ್ ಖರ್ಗೆಯವರ ಅಭಿವೃದ್ಧಿ ರಾಜಕಾರಣಕ್ಕೆ ಪ್ರತಿರೋಧ ಒಡ್ಡುವ ಯತ್ನವನ್ನು ಜಿಲ್ಲೆಯ ಬಿಜೆಪಿ ಮುಖಂಡರು ತೆರೆಮರೆಯಲ್ಲಿ ನಿಂತು ಮಣಿಕಂಠ ರಾಠೋಡ್ ಮೂಲಕ ಮಾಡಿಸುತ್ತಿದ್ದಾರೆ. ಆ ಮೂಲಕ ಬಿಜೆಪಿ ಕೇವಲ ಕೋಮುಸೌಹಾರ್ದ ಕೆಡಿಸುವುದರಲ್ಲಿ ಮಾತ್ರ ಶ್ರದ್ಧೆ ಹೊಂದಿರುವ ಪಕ್ಷ ಎಂಬುದನ್ನು ಸ್ವತಃ ಬಿಜೆಪಿ ಮುಖಂಡರು ಸಾಬೀತು ಮಾಡುತ್ತಿದ್ದಾರೆ ಎಂದು ಮೋದಿ ಟೀಕಿಸಿದ್ದಾರೆ.

# ರಾಷ್ಟ್ರೀಯ ಕಾನೂನು ಸೇವೆಗಳ ದಿನಾಚರಣೆ



ಜೇವರ್ಗಿ: ನೆಲೋಗಿ ಪೊಲೀಸ್ ಠಾಣೆಯ ಆವರಣದಲ್ಲಿ ರಾಷ್ಟ್ರೀಯ ಕಾನೂನು ಸೇವೆಗಳ ದಿನಾಚರಣೆಯ ಪ್ರಯುಕ್ತವಾಗಿ ತಾಲೂಕು ಕಾನೂನುಗಳ ಸೇವಾ ಸಮಿತಿ ವಕೀಲರ ಸಂಘ ಹಾಗೂ ಪೊಲೀಸ್ ಇಲಾಖೆ ಇವರ ಸಂಯುಕ್ತ ಆಶ್ರಯದಲ್ಲಿ ಕಾನೂನು ಸಾಕ್ಷರತಾ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಯಿತು. ಕಾರ್ಯಕ್ರಮದ ಉದ್ಘಾಟನೆಯನ್ನು ನೆರವೇರಿಸಿ ಮಾತನಾಡಿದ ಹಿರಿಯ ಶ್ರೇಣಿ ನ್ಯಾಯಾಲಯದ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನಾಯಿಕ ದಂಡಾಧಿಕಾರಿಗಳು ಹಾಗೂ ಅಧ್ಯಕ್ಷರು ತಾಲೂಕು ಕಾನೂನು ಸೇವೆಗಳ ಸಮಿತಿ ಶ್ರೀ ಸಂದೀಪ್ ನಾಯಕ ಸಮಾಜದ ಕಟ್ಟಕಡೆಯ ವ್ಯಕ್ತಿಯೂ ಸಹ ಕಾನೂನು ಸೇವೆಯನ್ನು ಪಡೆಯಬೇಕು ಅದನ್ನು ಶುಲ್ಕ ರಹಿತವಾಗಿ ಉಚಿತಾಗಿ ನೀಡುವುದು ರಾಷ್ಟ್ರೀಯ ಕಾನೂನು ಸೇವೆಗಳ ದಿನಾಚರಣೆಯ ಮುಖ್ಯ ಉದ್ದೇಶವಾಗಿದೆ ಎಂದು ಹೇಳಿದರು. ಮುಖ್ಯ ಅತಿಥಿಗಳಾಗಿ ಆಗಮಿಸಿ ಮಾತನಾಡಿದ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನಾಯಿಕ ದಂಡಾಧಿಕಾರಿಗಳು ಹಾಗೂ ಸದಸ್ಯ ಕಾರ್ಯದರ್ಶಿಗಳು ತಾಲೂಕು ಕಾನೂನು ಸೇವೆಗಳ ಸಮಿತಿ ಶ್ರೀ ಕಾಶಿನಾಥ್ ಉಪ್ಪಾರ್ ಮಾತನಾಡಿ ಸಮಾಜದಲ್ಲಿ ಸಮಾನತೆ ಹಾಗೂ ಕಾನೂನಿನ ಮೇಲೆ ವಿಶ್ವಾಸ ಮೂಡುವಂತೆ ಮಾಡಲು ಸಂವಿಧಾನ ಬದ್ಧವಾಗಿ ಪ್ರತಿಯೊಬ್ಬರಿಗೂ ತಮ್ಮ ಹಕ್ಕುಗಳನ್ನು ರಕ್ಷಿಸಿಕೊಳ್ಳುವ ಅವಕಾಶವಿದ್ದು ಪ್ರಾಧಿಕಾರದ ಸೇವೆಯನ್ನು ಸದುಪಯೋಗ ಪಡಿಸಿಕೊಳ್ಳಲು ಮುಂದೆ ಬರಬೇಕು ಎಂದರು. ವಿಶೇಷವಾದ ಉಪನ್ಯಾಸವನ್ನು ನೀಡಿ ಮಾತನಾಡಿದ ನ್ಯಾಯವಾದಿಗಳಾದ ಅಪ್ಪಾಸಾಹೇಬ್ ಕೊಳಕೂರ ರಾಷ್ಟ್ರೀಯ ಕಾನೂನು ಸೇವಾ ಪ್ರಾಧಿಕಾರದ ಅಡಿಯಲ್ಲಿ ರಾಷ್ಟ್ರೀಯ ,ರಾಜ್ಯ, ಜಿಲ್ಲೆ ಹಾಗೂ ತಾಲೂಕ ಮಟ್ಟದಲ್ಲಿ ಕಾನೂನು ಸಲಹೆ ಹಾಗೂ ಮಾರ್ಗದರ್ಶನಕ್ಕಾಗಿ ಸಮಿತಿಗಳನ್ನು ರಚಿಸಲಾಗಿದ್ದು ಸಾರ್ವಜನಿಕರು ಇದರ ಸದುಪಯೋಗವನ್ನು ಪಡಿಸಿಕೊಂಡು ಅನವಶ್ಯಕ ಸಮಯ ವ್ಯರ್ಥವಾಗುವುದನ್ನು ತಡೆಯಬೇಕು ಹಾಗೂ ಸಮಾಜದಲ್ಲಿ ಶಾಂತಿ ನೆಲೆಸಲು ಪ್ರಯತ್ನಿಸಬೇಕೆಂದು ತಿಳಿಸಿದರು.

ಇನ್ನೋರ್ವ ನ್ಯಾಯವಾದಿಗಳಾದ ರಾಜು ಮುದ್ದಡಗಿ ಉಪನ್ಯಾಸ ನೀಡಿ ಮಾತನಾಡಿ ಭಾರತದ ಸಂವಿಧಾನದ ಆಶಯದಂತೆ ಕಾನೂನಿನ ಮುಂದೆ ಎಲ್ಲರೂ ಸಮಾನರಾಗಿದ್ದು ಪ್ರತಿಯೊಬ್ಬರೂ ತಮ್ಮ ನ್ಯಾಯಯುತವಾದ ಹಕ್ಕನ್ನು ಗುರುತಿಸಿಕೊಂಡು ಸಮಾನತೆ ಹಾಗೂ ಸ್ವಾಭಿಮಾನದಿಂದ ತಲೆಯೆತ್ತಿ ಬದುಕಲು ಹಾಗೂ ತಮ್ಮ ಹಕ್ಕನ್ನು ರಕ್ಷಿಸಿಕೊಳ್ಳುವ ನಿಟ್ಟಿನಲ್ಲಿ ದುರ್ಬಲ ವರ್ಗದ ಹಾಗೂ ಪರಿಶಿಷ್ಟ ಜಾತಿ ಮತ್ತು ಪಂಗಡದ ಜನರಿಗೆ ಮಹಿಳೆಯರಿಗೆ, ಮಕ್ಕಳಿಗೆ, ಮೂರು ಲಕ್ಷಗಳಿಗಿಂತ ಕಡಿಮೆ ಆದಾಯ ಹೊಂದಿರುವವರಿಗೆ, ಸಂತ್ರಸ್ತರ ಕುಟುಂಬದವರಿಗೆ ಕಾನೂನು ಸೇವೆಗಳ ಸಮಿತಿ ಜೇವರ್ಗಿಯು ಸಹಾಯ ಹಸ್ತ ನೀಡಲು ಸದಾ ಸಿದ್ಧವಾಗಿದ್ದು ಇದರ ಸದುಪಯೋಗವನ್ನು ಪಡಿಸಿಕೊಳ್ಳಲು ತಿಳಿಸಿದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಚಿದಾನಂದ ಸೌದಿ ಪಿ.ಎಸ್.ಐ ಪೊಲೀಸ್ ಠಾಣೆ ಇವರು ವಹಿಸಿದ್ದರು. ಹಿರಿಯ ವಕೀಲರಾದ ಬಸವರಾಜ್ ಗುಳಗಿ ಸೇರಿದಂತೆ ವಕೀಲರ ಸಂಘದ ಕಾರ್ಯದರ್ಶಿಗಳಾದ ಬಿ.ಎನ್ ಕೊಂಬಿನ ನ್ಯಾಯವಾದಿಗಳಾದ ಶೇಖರ್ ಎಂ ಮಾಲಗತ್ತಿ, ಆನಂದ್ ಪಾಟೀಲ್ ,ಶರಣು ನೆಲೋಗಿ ,ಸೇರಿದಂತೆ ಗ್ರಾಮದ ಮುಖಂಡರು ಮಹಿಳೆಯರು ಹಾಗೂ ವಿದ್ಯಾರ್ಥಿಗಳು ರಾಷ್ಟ್ರೀಯ ಕಾನೂನು ಸೇವೆಗಳ ದಿನಾಚರಣೆಯ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

# ಮಲ್ಲಿಕಾರ್ಜುನ ಕಾಂಬಳೆಗೆ ಡಾಕ್ಟರೇಟ್



ಕಲಬುರಗಿ: ಗುಲ್ಬರ್ಗಾ ವಿಶ್ವವಿದ್ಯಾಲಯದ ವಾಣಿಜ್ಯ ವಿಭಾಗದಲ್ಲಿ ಮಲ್ಲಿಕಾರ್ಜುನ ಕಾಂಬಳೆ ಮಂಡಿಸಿದ ಸಂಶೋಧನಾ ಪ್ರಬಂಧಕ್ಕೆ ಗುಲಬರ್ಗಾ ವಿವಿ ಡಾಕ್ಟರೇಟ್ ಪದವಿ ಲಭಿಸಿದೆ "ಹುಮ್ನ ರಿಸೋರ್ಸ್ ಡೆವಲಪ್ಮೆಂಟ್ ಇನ್ ಹೈಯರ್ ಎಜುಕೇಶನ್ ಇನ್ಸ್ಟಿಟ್ಯೂಷನ್ಸ್ ಎ ಸ್ಟಡಿ ವಿಥ್ ರೆಫೆರೆನ್ಸ್ ಟೂ ಕಲ್ಯಾಣ ಕರ್ನಾಟಕ ರಿಜಿವ್ನ್" ಮಹಾ ಪ್ರಭಂದಕಕ್ಕೆ ಗುಲ್ಬರ್ಗ ವಿಶ್ವವಿದ್ಯಾಲಯಲ ಪಿಎಡಿ ಪದವಿ ನೀಡಿದೆ. ಸಹ ಪ್ರಾಧ್ಯಾಪಕರಾದ ಡಾ. ಕರಿಗೋಳೇಶ್ವರ ಮಾರ್ಗ ದರ್ಶಕರಾಗಿದರು.

## ಕರ್ನಾಟಕ ಕಲೆಗೆ ರಾಷ್ಟ್ರದ ಮಹತ್ವ :ಮುನೀಂದ್ರ ಶಿವಾಚಾರ್ಯ



ವಾಡಿ :ವಾಡಿಯಲ್ಲಿ ಹಲಕರ್ಟಿ ವೀರಭದ್ರೇಶ್ವರ ಜಾತ್ರಾ ಮಹೋತ್ಸವದ ಅಂಗವಾಗಿ ಕಲಾವಿದ ಮಲ್ಲಿಕಾರ್ಜುನ ವಿಶ್ವಕರ್ಮ ಮರದಿಂದ ಕೆತ್ತನೆ ಮಾಡಿದ ಅಂಬಲಿ ಬಂಡಿಯನ್ನು ಹಲಕರ್ಟಿ ಕಟ್ಟಿಮನಿ ಹಿರೇಮಠದ ಮುನೀಂದ್ರ ಶಿವಾಚಾರ್ಯರು ವೀಕ್ಷಿಸಿದರು.ನಂತರ ಅವರು ಮಾತನಾಡಿ, ನಮ್ಮ ರಾಜ್ಯ ಕಲೆಯಲ್ಲಿ ಬಹಳ ಮುಂದುವರೆದಿದೆ. ಉತ್ತರ ಪ್ರದೇಶದ ಅಯೋಧ್ಯೆಯಲ್ಲಿ ರಾಮಲಲ್ಲಾ ಮೂರ್ತಿ ಸಹಿತ ನಮ್ಮ ರಾಜ್ಯದ ಕಲಾವಿದರು ನಿರ್ಮಿಸಿದ್ದು, ಹೆಮ್ಮೆಯವಿಷಯಎಂದುಹೇಳಿದರು.ನಮ್ಮ ಗ್ರಾಮದ ಮಲ್ಲಿಕಾರ್ಜುನ ಅವರು ಅಂಬಲಿ ಬಂಡಿ ಸಿದ್ಧಪಡಿಸಿ ಕಲೆಗೆ ಮಹತ್ವ ನೀಡಿದ್ದಾರೆ ಎಂದು ಹೇಳಿದರು.ಈ ಸಂದರ್ಭದಲ್ಲಿ ರಾಜಶೇಖರ ಗೌಡ, ಚಂದ್ರಕಾಂತ ಮೇಲಿನ ಮನಿ,ರವೀಂದ್ರ ಚಿನವಾರ, ಬಸವರಾಜ ಲೋಕ ನಹಳ್ಳಿ,ವೀರಣ್ಣ ಯಾರಿ,ಬಸವರಾಜ ಮಹಾಗಾಂವ,ಸಂತೋಷ ಹೀರೆಮಠ, ಗಂಗಾಧರ ಹೀರೆಮಠ,ವಿಕಾಶ ವಿಶ್ವಕರ್ಮ, ಸುಧಾಕರ ನರಬೋಳಿ,ಶರಣಪ್ಪ ದೊಡ್ಡಮನಿ ಉಪಸ್ಥಿತರಿದ್ದರು. ಪುರಾತನ ಇತಿಹಾಸ ಹೊಂದಿದ ಹಲಕರ್ಟಿ ಗ್ರಾಮದ ವೀರಭದ್ರೇಶ್ವರಜಾತ್ರೆಅನೇಕಸಾಂಪ್ರದಾಯಿಕ ಆಚರಣೆಗಾಗಿ ಪ್ರಖ್ಯಾತಿಯಾಗಿದೆ.ಇದರ ಪ್ರಯುಕ್ತ ಮರದಿಂದ ಕೆತ್ತನೆ ಮಾಡಿದ ಬಂಡಿಯಲ್ಲಿ ಅಂಬಲಿಯನ್ನು ತಯಾರಿಸಿ ವಿಶೇಷ ಪೂಜೆಯೊಂದಿಗೆ ವೀರಭದ್ರೇಶ್ವರ ದೇವಸ್ಥಾನದಲ್ಲಿ ನೈವೇದ್ಯ ಮಾಡಲಾಗುವುದು.ನಂತರ ಅದನ್ನು ಐದು ದಿನಗಳ ಸೇವಿಸುವ ವಗ್ಗಯ್ಯ ಅವರು ಸರಪಳಿಯನ್ನು ಹರಿದು ಭಕ್ತಿ ಮೆರೆಯುವರು.ಅಂಬಲಿ ಬಂಡಿ ಅನೇಕ ದೇವರುಗಳ ಕೆತ್ತನೆಯ ಮೂಲಕ ಗಮನ ಸೆಳೆಯವುದು, ಎತ್ತುಗಳ ಮೂಲಕ ಮೆರವಣಿಗೆ ಕೈಗೊಳ್ಳುವುದ ಇದರ ಒಂದು ವಿಶೇಷವಾಗಿದೆ.

## ಡಾ.ತೋಂಟದ ಸಿದ್ಧಲಿಂಗ ಮಹಾಸ್ವಾಮಿಗಳ ನೆಲ,ಜಲ,ಪರಿಸರ ಬಗೆಗಿನ ಕಾಳಜಿ ಅನನ್ಯ



ಜೇವರ್ಗಿ: ಕ್ರಿಯಾಶೀಲತೆಯ ಮಾತೃ ಹೃದಯಿ ಲಿಂಗೈಕ್ಯ ಡಾ.ತೋಂಟದ ಸಿದ್ದಲಿಂಗ ಮಹಾಸ್ವಾಮಿಗಳು ಜಲ್, ಜಂಗಲ್, ಜಮೀನ್ ಉಳಿವಿಗಾಗಿ ಹೋರಾಟ ಮಾಡಿದ್ದಾರೆ ಎಂದು ಆಳಂದ್ ತೋಂಟದಾರ್ಯ ಅನುಭವ ಮಂಟಪದ ಕೊರ್ಣೇಶ್ವರ ಮಹಾ ಸ್ವಾಮೀಜಿ ಹೇಳಿದರು.

ಅವರು ಜೇವರ್ಗಿ ನಗರದ ಬಸವೇಶ್ವರ ಶಿಕ್ಷಣ ಮಹಾವಿದ್ಯಾಲಯದಲ್ಲಿ ಲಿಂಗೈಕ್ಯ ಡಾ!. ತೋಂಟದ ಸಿದ್ದಲಿಂಗ ಸ್ವಾಮೀಜಿಗಳ ಆರನೆಯ ಪುಣ್ಯಸ್ಮಣೆ ಕಾರ್ಯಕ್ರಮದಲ್ಲಿ ಸಾನಿಧ್ಯ ವಹಿಸಿ ಮಾತನಾಡಿದ ಅವರು ತೋಂಟದ ಸಿದ್ದಲಿಂಗ ಮಹಾಸ್ವಾಮಿಜಿ ಬಹುಮುಖ ವ್ಯಕ್ತಿತ್ವದ ಮೇರು ಕಾವಿಧಾರಿ. ಶ್ರೇಷ್ಠ ಶ್ರೇಣಿಯ ಪರ್ವತ. ಅವರ ವಿಶಿಷ್ಟ ಬದುಕಿನ ಬಗೆಗೆ ಸಾವಿರಾರು ಸಹೃದಯಿ ಭಾವದ ಮಾತುಗಳಿವೆ.ಸಮಾಜಕ್ಕೆ ಅವಿಸ್ಮರಣೀಯ ಆದರ್ಶಗಳನ್ನು ನೀಡಿದ್ದಾರೆ. ಪೂಜ್ಯರ ಅಂತಃಕರಣ ಅಮೂಲ್ಯಮಯ.ಅವುಗಳನ್ನು ಬಣ್ಣಿಸಲು, ವ್ಯಾಖ್ಯಾನಿಸಲು ಪದಗಳಿಲ್ಲ ಎಂದು ತೋಂಟದಾರ್ಯ ಅನುಭವ ಮಂಟಪ ಆಳಂದನ ಕೊರುಣೇಶ್ವರ ಮಹಾಸ್ವಾಮಿಗಳು ನುಡಿದರು. ಡಾ.ತೋಂಟದ ಸಿದ್ದಲಿಂಗ ಮಹಾಸ್ವಾಮಿಗಳು

ನಾಡಿನ ನೆಲ,ಜಲ,ಪರಿಸರ ಬಗೆಗಿನ ಕಾಳಜಿ ಅಮೋಘ.ಅನನ್ಯ. ಸಾಹಿತ್ಯ, ಸಂಸ್ಕೃತಿ,ಕಲೆ,ಸಂಗೀತ ಪ್ರೀತಿಸುವ ಮಹಾದಾಸೆಯ ಗುಣ ತೋಂಟದ ಸಿದ್ದಲಿಂಗ ಶ್ರೀಗಳವರಲ್ಲಿತ್ತು.ಇವುಗಳಿಗಾಗಿ ತಮ್ಮ ಬದುಕು ಮೀಸಲಿರಿಸಿದ್ದರು.ಪೂಜ್ಯರು ಸಮಾಜದ ಕಣ್ಣಾಗಿದ್ದರು. ಮಾನವೀಯತೆಯ ಅಂತಃಕರಣ ಹೊಂದಿದ್ದರು. ಅವರ ದೂರ ದೃಷ್ಟಿಯ ಮಹಾನ ಕಾರ್ಯಗಳ ಕೈಂಕರ್ಯದ ಸಾರ ನಿಜಕ್ಕೂ ಉನ್ನತ ಮಟ್ಟದಲ್ಲಿ ಅನುಪಮವಾಗಿವೆ ಎಂದು ಬಣ್ಣಿಸಿದರು.

ನೇರ ನಡೆ,ನುಡಿ,ನಿಷ್ಠುರತೆಗೆ ಖ್ಯಾತಿ ಜೊತೆಗೆ ಸಮಾಜಕ್ಕೆ ಮಾರ್ಗದರ್ಶಿಯಾಗಿದ್ದರು. ಭಕ್ತರ ಆಂತರಿಕ ಭಾವನೆಗಳಿಗೆ ಸ್ಪೂರ್ತಿಯ ಸೆಲೆ ನೀಡಿದ್ದಾರೆ. ಸ್ಪಶಿ9ಸಿದ್ದಾರೆ. ಚೇತನಭರಿತ ವ್ಯಕ್ತಿತ್ವ ಲಿಂ,ಸಿದ್ದಲಿಂಗ ಶ್ರೀಗಳದ್ದಾಗಿದೆ ಎಂದರು.

ಪ್ರೀತಿ,ನಂಬಿಕೆ ಎನ್ನುವ ವಸ್ತು ಬಹಳಷ್ಟು ಪವಿತ್ರ. ಪ್ರೀತಿಗಿಂತಲೂ ಶ್ರೇಷ್ಠ ವಸ್ತು ಜಗತ್ತಿನಲ್ಲಿ ಬೇರೆ ಯಾವುದು ಇಲ್ಲ.ಎಲ್ಲರೂ ಪ್ರೀತಿ ವಿಶ್ವಾಸದಿಂದಿರುವ ಮನೋಭಾವ ಬೆಳೆಸಿಕೊಳ್ಳಬೇಕು. ಲಿಂ,ಸಿದ್ದಲಿಂಗ ಶ್ರೀಗಳು ಎಲ್ಲರಿಗೂ ಪ್ರೀತಿ ತೋರಿದ್ದಾರೆ. ಶ್ರೀಮಠದಲ್ಲಿ ಅವಕಾಶ ಕಲ್ಪಿಸಿದ್ದಾರೆ. ಸೌಹಾರ್ದತೆ ಕಣಗಳನ್ನು ಬಿತ್ತಿದ್ದಾರೆ. ಪೂಜ್ಯರ ತತ್ವಾದರ್ಶ ಮೌಲ್ಯದಲ್ಲಿ ನಾವೆಲ್ಲರೂ ಸಾಗೋಣ. ಅವರು ಕಂಡ ಕನಸು ನನಸಾಗಿಸೋಣ.ಆ ನಿಟ್ಟಿನಲ್ಲಿ ಕೆಲಸ ಕಾರ್ಯಗಳನ್ನು ಗೈಯೋಣ. ಸಿದ್ದಲಿಂಗ ಶ್ರೀಗಳ ಸೌಹಾರ್ದತೆ ಸಂದೇಶ,ಆದರ್ಶತನದ ಭಾವ ಎಲ್ಲರಲ್ಲೂ ಮನೆ ಮಾಡಲಿ ಎಂದು ಆಳಂದ ತೋಂಟದಾರ್ಯ ಅನುಭವ ಮಂಟಪದ ಪೂಜ್ಯ ಕೊರ್ಣೇಶ್ವರ ಮಹಾಸ್ವಾಮಿಗಳು ಹೇಳಿದರು.

ಕಾರ್ಯಕ್ರಮದ ಅಧ್ಯಕ್ಷತೆ ಸ್ಥಾನವನ್ನು ವಹಿಸಿಕೊಂಡು ಮಾತನಾಡಿದ ಕಲಬುರ್ಗಿ ದಕ್ಷಿಣ ಕ್ಷೇತ್ರದ ಶಾಸಕರಾದ ಅಲ್ಲಮಪ್ರಭು ಪಾಟೀಲ್, ಮಾತನಾಡಿ ತೋಂಟದ ಲಿಂ, ಡಾ.ಸಿದ್ದಲಿಂಗ ಶ್ರೀಗಳವರ ಹೆಸರಿನ ಮೇಲೆ ರಾಷ್ಟ್ರೀಯ ಸ್ಮಾರಕ ಸಾಧಕರಿಗೆ ಪ್ರಶಸ್ತಿ ನೀಡಲಾಗುತ್ತಿದೆ. ಕಳೆದ ಐದು ವರ್ಷದಿಂದ ಈ ಸಂಪ್ರದಾಯ ಸಾಗುತ್ತಿದ್ದು ಈ ಬಾರಿ ಪೂಜ್ಯರ ಆಶಯಗಳಿಗೆ ತಕ್ಕಂತೆ ಈ ಬಾರಿ ಗೋರೂರು ಚನ್ನಬಸಪ್ಪ ಅವರಿಗೆ ನೀಡಿದ್ದಾರೆ ಸಂತಸ ತಂದಿದೆ. ಅವರು ಜಾನಪದ, ಬಸವತತ್ವ,ವಚನ ಸಾಹಿತ್ಯಕ್ಕೆ ತಮ್ಮ ಸೇವೆ ಪ್ರಸಾರ ಮಾಡಿದ್ದಾರೆ.

ಲಿಂ,ಸಿದ್ದಲಿಂಗ ಪೂಜ್ಯರು ಬಸವತತ್ವದಡಿಯಲ್ಲಿ ಬಾಳಿ ಬದುಕಿ ನಮಗೆಲ್ಲ ನವ ಬೆಳಕು ನೀಡಿದ್ದಾರೆ. ಅವರ ವೈಚಾರಿಕ ಪ್ರಜ್ಞೆ ಅದ್ಭುತ. ನುಡಿಯುತ್ತಿದ್ದ ವಾಣಿಗಳಂತೂ ಅತ್ಯಾದ್ಭುತ. ಸಾಮಾನ್ಯರ ಸ್ವಾಮೀಜಿಗಳಾಗಿ ಎಲ್ಲರ ಮನದಲ್ಲಿ ಹಸಿರಾಗಿದ್ದಾರೆ. ಪೂಜ್ಯರ ಮೊಗದ ತೇಜಸ್ ಭರಿತ ಕಳೆ ಕಣ್ಣಂಚಿನಲ್ಲಿ ಸುಳಿದಾಡುತ್ತಿವೆ. ಅಪರೂಪದ ಪೂಜ್ಯರನ್ನು ಎಂದು ಮರೆಯಲಾಗದು.ಸದಾಕಾಲ ಶ್ರೀಗಳು ಪ್ರಾತಃಸ್ಮರಣೀಯರಾಗಿದ್ದಾರೆ ಎಂದು ಕಲ್ಬುರ್ಗಿ ದಕ್ಷಿಣ ಮತಕ್ಷೇತ್ರದ ಶಾಸಕರಾದ ಅಲ್ಲಮಪ್ರಭು ಪಾಟೀಲ್ ಹೇಳಿದರು. ಕಾರ್ಯಕ್ರಮದಲ್ಲಿ ಉಪಾಧ್ಯಕ್ಷರಾದ ಶಿವನಗೌಡ ಪಾಟೀಲ ಹಂಗರಗಿ, ಗೌಡಪ್ಪಗೌಡ ಪಾಟೀಲ್ ಆಂದೋಲ, ಸಾಹಿತಿ ಎ.ಕೆ. ರಾಮೇಶ್ವರ, ನಾಗನಗೌಡ ಜೈನಾಪುರ್, ಶರಣಬಸವ ಕಲ್ಲಾ, ರಾಯಪ್ಪ ಬಾರಿಗಿಡ, ಇಂಜಿನಿಯರ್ ಕುಳಗೇರಿ, ಸೇರಿದಂತೆ ಉಪನ್ಯಾಸಕರು, ವಿದ್ಯಾರ್ಥಿಗಳು ಸೇರಿ ಮುಂತಾದವರು ಹಾಜರಿದ್ದರು.

## ಕಲಾವಿದ ರೆಹಮಾನ್ ಪಟೇಲ್‌ರಿಗೆ ಧಾರವಾಡದಲ್ಲಿ ರಾಜ್ಯೋತ್ಸವ ಪ್ರಶಸ್ತಿ ಪ್ರದಾನ



ಕಲಬುರಗಿ:ಧಾರವಾಡದ ರಾಷ್ಟ್ರೀಯ ದೃಶ್ಯಕಲಾ ಅಕಾಡೆಮಿಯು ವಾರ್ಷಿಕವಾಗಿ ನೀಡುವ "ರಾಷ್ಟ್ರೀಯ ದೃಶ್ಯಕಲಾ ಅಕಾಡೆಮಿ ರಾಜ್ಯೋತ್ಸವ ಪ್ರಶಸ್ತಿ-2024ಕ್ಕೆ ಕಲಾವಿದ ಮತ್ತು ಸಂಶೋಧಕ ರೆಹಮಾನ್ ಪಟೇಲ್ ಅವರನ್ನು ಆಯ್ಕೆ ಮಾಡಲಾಗಿದೆ. ನವೆಂಬರ್ 15ರಂದು ಧಾರವಾಡದ ಜೆಎಸ್ ಹಾಲಭಾವಿ ಸ್ಕೂಲ್ ಆಫ್ ಆರ್ಟ್ ಸಭಾಂಗಣದಲ್ಲಿ ಪ್ರಶಸ್ತಿ ಪ್ರದಾನ ಸಮಾರಂಭ ನಡೆಯಲಿದೆ ಎಂದು ಅಕಾಡೆಮಿ ಅಧ್ಯಕ್ಷ ಪ್ರೊ. ಎಸ್.ಸಿ. ಪಾಟೀಲ ಪತ್ರದ ಮೂಲಕ ತಿಳಿಸಿದ್ದಾರೆ.

ಚಿತ್ರಕಲೆಯ ಹೊರತಾಗಿ ಡಾ. ಪಟೇಲ್ ಅವರು ಡೆಕ್ಕನ್ ಇತಿಹಾಸದಲ್ಲಿ ವಿಶೇಷವಾಗಿ ಬಹಮನಿ ಕಲೆ ಮತ್ತು ವಾಸ್ತುಶಿಲ್ಪದ ಮೇಲೆ ಕಳೆದ ಹಲವಾರು ವರ್ಷಗಳಿಂದ ಕೆಲಸ ಮಾಡುತ್ತಿದ್ದಾರೆ.

# ಮೊಬೈಲ್ ಮಾಯಾಂಗನೆ ಸೆರೆಯಿಂದ ಮುಕ್ತಿಗೆ ಕೆಲ ಸಲಹೆಗಳು

■ ಉದಯರಶ್ಮಿ ದಿನಪತ್ರಿಕೆ

ಅಯ್ಯೋ! ಈ ಮೊಬೈಲ್ ಕೈಯಲ್ಲಿ ಹಿಡ್ಕೊಂಡಿದ್ದೇ ಆಯ್ತು ಸಮಯ ಹೋದದ್ದೇ ಗೊತ್ತಾಗ್ಲಿಲ್ಲ.. ಇನ್ನೇನು ಗಂಡ ಮಕ್ಕಳು ಮನೆಗೆ ಬರುವ ಸಮಯ ಅಡುಗೆ ಆಗಿಲ್ಲ, ಹಾಳಾದ್ದು ಇನ್ಮೇಲೆ ಈ ಮೊಬೈಲ್ ಸಹವಾಸವೇ ಬೇಡ ಎಂದು ಗೊಣಗುತ್ತಾ ಅಡುಗೆಮನೆಗೆ ಓಡಿದಳು ಆ ಗೃಹಿಣಿ. ಇವತ್ತು ನಾನು ಮೊಬೈಲ್ ಮುಟ್ಟಲ್ಲಪ್ಪ.. ನಾಳೆನೇ ಪರೀಕ್ಷೆ ಇದೆ. ಆದ್ರೂ ಒಂದು ಸಾರಿ ಎಲ್ಲಾ ನೋಟಿಫಿಕೇಶನ್ ಕಡೆ ಕಣ್ಣಾಡಿಸಿ ಓದೋಕೆ ಕೂತ್ಕೊಂಡ್ ಬಿಡ್ತೀನಿ ಎಂದು ಹೇಳಿದ ಕಾಲೇಜ್ ವಿದ್ಯಾರ್ಥಿ ಸರಿ ಸುಮಾರು 2 ಗಂಟೆಗಳ ಕಾಲ ಮೊಬೈಲ್ ನಲ್ಲಿ ಮುಳುಗಿ ಅಲ್ಲೇ ತೂಕಡಿಸಿದ್ದನು.

ನಾಳೆ ಬೆಳಿಗ್ಗೆ ಕಸ್ಟಮರ್ ಜೊತೆ ತುಂಬಾ ಇಂಪಾರ್ಟೆಂಟ್ ಮೀಟಿಂಗ್ ಇದೆ.. ಎಲ್ಲ ಕೆಲಸನೂ ಬಾಸ್ ನನಗೆ ವಹಿಸಿದ್ದಾರೆ. ಬೇಗ ಎದ್ದು ರೆಡಿಯಾಗಿ ಪ್ರೆಸೆಂಟೇಶನ್ಗೆ ತಯಾರಾಗಬೇಕು ಎಂದು ತನಗೆ ತಾನೇ ಹೇಳಿಕೊಂಡ ಐ.ಟಿ.ನೌಕರ ಇಂದು ನೆಟ್ ಫ್ಲಿಕ್ಸಲ್ಲಿ ರಿಲೀಸ್ ಆಗಿರೋ ಹೊಸ ಮೂವಿ ನೋಡೋದಕ್ಕೆ ಕುಳಿತುಕೊಂಡು ರಾತ್ರಿ ಲೇಟಾಗಿ ಮಲಗಿದ ಪರಿಣಾಮವಾಗಿ ಬೆಳಿಗ್ಗೆ ಬೇಗ ಏಳಲು ಸಾಧ್ಯವಾಗದೆ ಪ್ರೆಸೆಂಟೇಶನ್ ಕೂಡ ತಯಾರು ಮಾಡಿಕೊಳ್ಳದೆ ಹಾಳಾದ ಮೊಬೈಲ್ ಎಂದು ಶಪಿಸುತ್ತಾ ಗಡಿಬಿಡಿಯಿಂದ ಆಫೀಸಿಗೆ ಓಡಿದ.

ರಿಟೈರ್ ಆಗಿದೆ, ಮನೇಲಿ ಆರಾಮಾಗಿ ಹೆಂಡ್ತಿ ಮಾಡಿ ಹಾಕಿದ್ದನ್ನು ತಿನ್ಕೊಂಡು ಜುಮ್ ಅಂತ ಟೈಮ್ ಪಾಸ್ ಮಾಡಬೇಕು ಅಂತ ಅಂದುಕೊಂಡ ವ್ಯಕ್ತಿ ಇಂದು ಮೊಬೈಲ್ ನ



ದಾಸಾನುದಾಸನಾಗಿದ್ದಾನೆ.

ಈ ಹಿಂದೆ ಮುಂಜಾನೆ ಏಳುತ್ತಲೇ ಎರಡು ಕೈಗಳನ್ನು ಜೋಡಿಸಿ ಕಾಣದ ದೇವರಿಗೆ ಕೈ ಮುಗಿದು ತಮ್ಮ ದೈನಂದಿನ ಕೆಲಸಗಳನ್ನು ಪ್ರಾರಂಭಿಸುತ್ತಿದ್ದ ಜನರೀಗ

ಮುಂಜಾನೆ ದಿಂಬಿನ ಕೆಳಗೆ ಇಟ್ಟ ತಮ್ಮ ಮೊಬೈಲನ್ನು ತಡಕಾಡಿ ಕೈಯಲ್ಲಿ ಹಿಡಿದು ಒಂದೈದು ನಿಮಿಷ ಬಿಸಿ ನೀರು ಕಾಯೋವರೆಗೆ ಇಂಪಾರ್ಟೆಂಟ್ ಮೆಸೇಜ್ ಗಳನ್ನು ನೋಡಿ ಬಿಡ್ತೀನಿ ಎಂದವರು ಒಂದರ ಹಿಂದೊಂದರಂತೆ ಮೆಸೇಜ್ಗಳು, ರೀಲ್ಸ್ ಗಳನ್ನು ನೋಡುತ್ತಾ ಸಮಯ ಕಳೆದುಹೋದದ್ದರ ಪರಿವೇ ಇಲ್ಲದೆ ಗಡಬಡಿಸಿ ನಿತ್ಯ ಕರ್ಮಗಳಿಗೆ ಧಾವಿಸಿ ಹೋಗುವುದನ್ನು, ಮುಂದಿನ ಎಲ್ಲಾ ಕೆಲಸಗಳಿಗೆ ಅವಸರಿಸಿ ಹಾಳಾದ್ದು ಎಲ್ಲಾ ಈ ಮೊಬೈಲ್ನಿಂದಲೇ!! ಎಂದು ಬೈದುಕೊಳ್ಳುವುದು ಪ್ರತಿ ದಿನದ ಪ್ರತಿ ಮನೆಯಲ್ಲಿ ನಡೆಯುವ ಮೊಬೈಲಾಯಣದ ಕಥೆಯಾಗಿದೆ.

## ವೀಣಾಂತರಂಗ'

ಮೊಬೈಲ್ ನ ಕುರಿತಾದ ಹಲವಾರು ಜೋಕುಗಳು ಚಾಲ್ತಿಯಲ್ಲಿದ್ದು ಆಗ ತಾನೆ ಮಗುವನ್ನು ಹೆತ್ತ ತಾಯಿ ಆಸ್ಪತ್ರೆಯ ಹಾಸಿಗೆಯ ಮೇಲೆ ಗಾಬರಿಯಿಂದ ಏನನ್ನೋ ಹುಡುಕಾಡುವುದನ್ನು ಕಂಡ ನರ್ಸ್ ಬಹುಶಹ ಆಗ ತಾನೇ ಹುಟ್ಟಿದ ಮಗುವನ್ನು ಹುಡುಕುತ್ತಿರಬಹುದೆಂದು ಭಾವಿಸಿ ನಿಮ್ಮ ಮಗು ಇಲ್ಲಿದೆ ಎಂದು ತೋ-ರಿಸಿದಾಗ ಆ ಹೆಣ್ಣು ಮಗಳು ಊಹೂಂ! ನಾನು ಹುಡುಕುತ್ತಿರುವುದು ನನ್ನ ಮೊಬೈಲನ್ನು ಎಂದು ಹೇಳಿದ ರೀತಿ ನಗೆಯನ್ನು ಉಕ್-ಕಿಸುತ್ತದೆ. ಮತ್ತೊಂದೆಡೆ ಮೊಬೈಲ್ ನಲ್ಲಿ ಮುಳುಗಿದ್ದ ತಾಯಿ ತನ್ನ ಮಗುವನ್ನು ಫ್ರಿಜ್ಜಿನಲ್ಲಿ ಇಟ್ಟ ಹೃದಯ ಕಲಕುವ ವಿಡಿಯೋ

ಹೀಗೆ ಹತ್ತು ಹಲವು ವಿಡಿಯೋಗಳು ಮೊಬೈಲ್ನಂತಹ ಗ್ಯಾಜೆಟ್ ಗಳ ಕುರಿತ ಮನ ಕಲಕುವ ಸಂಗತಿಗಳನ್ನು ನಾವು ನೋಡುವುದು ಮತ್ತೆ ಅದೇ ಸಾಮಾಜಿಕ ಜಾಲತಾಣಗಳ ಮೂಲಕವೇ ಎಂಬುದು ವಿಪರ್ಯಾಸದ ಸಂಗತಿ. ಮೊದಲ ನೋಟಕ್ಕೆ ಮೊಬೈಲ್ ಗೆ ನಾವು ಎಷ್ಟು ಅಂಟಿಕೊಂಡಿದ್ದೇವೆ ಎಂಬುದನ್ನು ನಗೆಯುಕ್ಕಿಸುವಂತೆ ಹೇಳುವ ಈ ವಿಡಿಯೋಗಳ ಹಿಂದೆ ಆಳವಾದ ಎಚ್ಚರಿಕೆಯ ಸಂದೇಶವಿದೆ.

### ಊಟದಲ್ಲಿ ಉಪ್ಪಿನಕಾಯಿಯಂತೆ

ಊಟದಲ್ಲಿ ಉಪ್ಪಿನಕಾಯಿ ಇರಬೇಕೇ ಹೊರತು, ಉಪ್ಪಿನಕಾಯಿಯೇ ಊಟವಾದರೆ ಏನು ಚೆನ್ನ ಅಲ್ಲವೇ? ಉಹೂಂ! ಉಪ್ಪಿನಕಾಯಿ ಎಂದೂ ಊಟವಾಗಲಾರದು.

ಹಾಗೆಯೇ ಸಾಮಾಜಿಕ ಜಾಲತಾಣಗಳು ನಮ್ಮ ಬದುಕಿನ ಭಾಗವಾಗಬೇಕೇ,ಹೊರತು ನಾವು ಅವುಗಳ ದಾಸರಾಗಬಾರದು. ಅಂಗೈಯಲ್ಲಿರುವ ಲಿಂಗದಂತೆ ಇದೀಗ ಎಲ್ಲರ ಕೈಯಲ್ಲೂ ಮೊಬೈಲಿದ್ದು ತಿಂಗಳಿಗಾಗುವಷ್ಟು ಮೊಬೈಲ್ ಡಾಟಾ ಇದ್ದರೆ ಆತನಷ್ಟು ಶ್ರೀಮಂತ ಬೇರಾರು ಇಲ್ಲ ಎಂಬ ಭಾವದಲ್ಲಿ ಮೊಬೈಲಿನ ಸ್ಕ್ರೀನನ್ನು ತೀಡಿದ್ದೇ ತೀಡಿದ್ದು.. ಮೊಬೈಲ್ ನಮ್ಮ ಶಕ್ತಿಸಾಮರ್ಥ್ಯಗಳನ್ನು, ಜಾಣ್ಮೆಯನ್ನು, ಉತ್ಪಾದಕತೆಯನ್ನು ಕಟ್ಟಿ ಹಾಕಿದೆ ಎಂದರೆ ತಪ್ಪಿಲ್ಲ ಅಲ್ಲವೇ?

### ಬಿಟ್ಟೆನೆಂದರೂ ಬಿಡದೀ ಮಾಯೆ

'ಬಿಟ್ಟೆನೆಂದರೂ ಬಿಡದೀ ಮಾಯೆ' ಎಂಬಂತೆ ಮೊಬೈಲ್ ಫೋನ್ಗಳು ನಮ್ಮನ್ನು ಬೆನ್ನು



ಬಿಡದ ಬೇತಾಳದಂತೆ ಆವರಿಸಿಕೊಂಡಿವೆ. ಕ್ಷಣ ಕಾಲ ಇದರಿಂದ ಹೊರಬರಬೇಕೆನ್ನುವ ಆಶಯ ಎಲ್ಲರಲ್ಲೂ ಇದ್ದರೂ ಹೇಗೆ ಎಂಬುದು ಬೃಹತ್ ಪ್ರಶ್ನೆಯಾಗಿ ಕಾಡುತ್ತದೆ. ಮೊಬೈಲ್ ನ ಈ ತೊಂದರೆಗಳಿಂದ ಹೊರಬರಲು ಇಲ್ಲಿವೆ ಕೆಲವು ಸಲಹೆಗಳು

* ದಿನಕ್ಕೆ ಇಂತಿಷ್ಟೇ ಸಮಯ ಮೊಬೈಲ್ ಬಳಸುತ್ತೇನೆ ಎಂದು ನಿಮಗೆ ನೀವೇ ಒಂದು ನಿಯಮಿತತೆಯನ್ನು ಹಾಕಿಕೊಳ್ಳಿ... ಯಾವುದೇ ಕಾರಣಕ್ಕೂ, ಒತ್ತಡಕ್ಕೂ ಈ ನಿಯಮವನ್ನು ಮುರಿಯದಿರಿ. ತಂತ್ರಜ್ಞಾನದ ಬಳಕೆಯನ್ನು ಅವಶ್ಯಕವಿದ್ದಷ್ಟೇ ಮಾಡುವುದು ಸಮರ್ಥನೀಯ.
* ಸಾಮಾಜಿಕ ಜಾಲತಾಣಗಳ ಬಳಕೆಗೆ ಸಮಯ ಮಿತಿಯನ್ನು ಹಾಕಿಕೊಳ್ಳುವುದು ಒಳಿತು. ರಿಮೈಂಡರ್ ಇಟ್ಟುಕೊಂಡು ಆ ಸಮಯದ ನಂತರ ಮೊಬೈಲ್ ಅನ್ನು ಉಪಯೋಗಿಸುವುದಿಲ್ಲ ಎಂದು ನಿಯಮಗಳನ್ನು ಹಾಕಿಕೊಳ್ಳುವುದು ಅಷ್ಟೇ ಅಲ್ಲ, ಪಾಲನೆ ಮಾಡಬೇಕು.
* ಟಾಯ್ಲೆಟ್ ಗೆ ಮೊಬೈಲ ಒಯ್ಯದಿರಿ. ಸ್ಕ್ರೀನ್ ಟೈಮಿಂಗ್ ನಲ್ಲಿ ಬಳಸುವ ಸಮಯವನ್ನು ದೈಹಿಕ ಚಟುವಟಿಕೆಗಳಿಗೆ ಮೀಸಲಾಗಿರಿಸಿ. ಸ್ನೇಹಿತರೊಂದಿಗೆ ವಾಕಿಂಗ್ ಮಾಡಿ, ಮನೆ ಓರಣವಾಗಿ ಇಡುವಲ್ಲಿ ಸಹಾಯ ಹಸ್ತವನ್ನು ಎಸಗಿ, ಬಟ್ಟೆಗಳನ್ನು ಮಡಚಿಡುವುದು, ಐರನ್ ಮಾಡುವುದು, ಗಿಡಗಳಿಗೆ ನೀರುಣಿಸುವುದು ಮುಂತಾದ ದೈಹಿಕ ಚಟುವಟಿಕೆಗಳಲ್ಲಿ ನಿಮ್ಮನ್ನು ನೀವು ತೊಡಗಿಸಿಕೊಳ್ಳಿ.
* ದೈನಂದಿನ ಸ್ಕ್ರೀನ್ ಬಳಕೆಯ ಸಮಯವನ್ನು ಕಡಿಮೆ ಮಾಡಿದ ನಂತರದ ಬೆಳವಣಿಗೆಗಳನ್ನು ಪುಸ್ತಕದಲ್ಲಿ ಗುರುತು ಹಾಕಿಕೊಳ್ಳಿ. ನಿಮ್ಮ ಭಾವನಾತ್ಮಕ ಸ್ಥಿತ್ಯಂತರಗಳು ಕಡಿಮೆಯಾಗಿ ನೀವು ಉಲ್ಲಸಿತರಾಗಿದ್ದರೆ, ಒಳ್ಳೆಯ ನಿದ್ರೆ ಮುಂತಾದ ಧನಾತ್ಮಕ ಪರಿಣಾಮಗಳ ಅರಿವು ಉಂಟಾದಾಗ ನಿಮಗೆ ನಿಮ್ಮ ಈ ಗ್ಯಾಜೆಟ್ಗಳಿಂದ ದೂರವಿರುವ ಕಾರ್ಯಕ್ಕೆ ಮುನ್ನಡೆ ಖಂಡಿತವಾಗಿಯೂ ಸಿಕ್ಕುತ್ತದೆ.
* ಮನೆಯ ಊಟದ ಕೋಣೆ ಮತ್ತು ಮಲಗುವ ಕೋಣೆಯಲ್ಲಿ ಮೊಬೈಲ್, ಲ್ಯಾಪ್ಟಾಪ್, ಟಿವಿ ಇರದಂತೆ ನೋಡಿಕೊಳ್ಳುವ ಮೂಲಕ ಕೂಡ ಡಿಜಿಟಲ್ ಡಿಟಾಕ್ಸ್ ಮಾಡಬಹುದು.
* ಊಟದ ಟೇಬಲ್ಲಿಗೆ ಮೊಬೈಲನ್ನು ತರದಂತೆ ಕಡ್ಡಾಯವಾಗಿ ನಿಷೇಧಿಸಬೇಕು. ಯೋಗ, ದೀರ್ಘ ಉಸಿರಾಟ ಕ್ರಿಯೆಗಳು, ಧ್ಯಾನದಂತಹ ಕ್ರಿಯೆಗಳಲ್ಲಿ ತೊಡಗಿಸಿಕೊಳ್ಳಬೇಕು. ಯಾವುದೇ ತಾಂತ್ರಿಕ ಉಪಕರಣಗಳನ್ನು ಬಳಸದೆ ನಿಮ್ಮದೇ ಪುಸ್ತಕ ಇಲ್ಲವೇ ಡೈರಿಯಲ್ಲಿ ದೈನಂದಿನ ಪ್ರಗತಿಗಳನ್ನು ದಾಖಲು ಮಾಡುವ ಮೂಲಕ ಸ್ಫೂರ್ತಿ ಹೊಂದಬೇಕು.
* ದೈಹಿಕ ಆರೋಗ್ಯಕ್ಕಾಗಿ ಉಪವಾಸವನ್ನು ಆಚರಿಸುವಂತೆಯೇ ತಾಂತ್ರಿಕ ಉಪಕರಣಗಳ ಬಳಕೆಯ ಉಪವಾಸವನ್ನು ಆಚರಿಸಬೇಕು. ದಿನಕ್ಕೆ ಕನಿಷ್ಠ ಒಂದು ಗಂಟೆಯಿಂದ ಎರಡು ಗಂಟೆ ಅವಧಿಯವರೆಗೆ ಕ್ರಮೇಣವಾಗಿ ವಿಸ್ತರಿಸುತ್ತಾ ಡಿಜಿಟಲ್ ಮಾಧ್ಯಮಗಳನ್ನು ದೂರವಿಡಬೇಕು. ವಾರದಲ್ಲಿ ಒಂದು ದಿನ ಕಡ್ಡಾಯವಾಗಿ ಡಿಜಿಟಲ್ ಮಾಧ್ಯಮಗಳನ್ನು, ಸಾಮಾಜಿಕ ಜಾಲತಾಣಗಳನ್ನು ಬಳಸದೇ ಇರಲು ಪ್ರಯತ್ನಿಸಿ ಅದರಲ್ಲಿ ಯಶಸ್ವಿಯಾಗಬೇಕು.
* ಮದ್ಯಪಾನ, ಧೂಮ್ರಪಾನ ಮತ್ತು ಮಾದಕ ವಸ್ತುಗಳ ಸೇವನೆಗಳನ್ನು ಮಾತ್ರ ದುಶ್ಚಟ ಎಂದು ಪರಿಗಣಿಸಬೇಕಾಗಿಲ್ಲ. ಅತಿಯಾದ ಮೊಬೈಲ್ ಬಳಕೆ, ಸಾಮಾಜಿಕ ಜಾಲತಾಣಗಳಲ್ಲಿ ತೊಡಗಿಸಿಕೊಳ್ಳುವಿಕೆ ಕೂಡ ದುಶ್ಚಟ ಎಂದು ಪರಿಗಣಿಸುವ ಪರಿಸ್ಥಿತಿ ಎದುರಾಗಿದೆ. ಈಗಾಗಲೇ ಮೊಬೈಲ್ ನ ವಿಪರೀತ ಬಳಕೆಯಿಂದ ಮಾನಸಿಕವಾಗಿ ಅಸ್ವಸ್ಥರಾಗುತ್ತಿರುವ ಮಕ್ಕಳ ಸಂಖ್ಯೆ ಹೆಚ್ಚಾಗಿದ್ದು ಮಹಾನಗರಗಳಲ್ಲಿ ವಿದ್ಯುನ್ಮಾನ ಯಂತ್ರಗಳ ಡಿ ಅಡಿಕ್ಷನ್ ಸೆಂಟರ್ ಗಳನ್ನು ತೆರೆದು ಚಿಕಿತ್ಸೆ ನೀಡಲಾಗುತ್ತಿದೆ ಎಂದರೆ ಪರಿಸ್ಥಿತಿಯ ಗಂಭೀರತೆಯ ಅರಿವಾಗಬಹುದು.

ಕೇವಲ ಎರಡು ದಶಕಗಳ ಹಿಂದೆ ಮೊಬೈಲ್ ವಾಮನನಂತೆ ನಮ್ಮಲ್ಲಿ ಕಾಲಿರಿಸಿದ ಮೊಬೈಲ್ ಇಂದು ತ್ರಿವಿಕ್ರಮನಂತೆ ಜಗದಗಲ ಮುಗಿಲಗಲ( ಅಂಗೈಯಗಲ ) ಪಸರಿಸಿದೆ. ಆರೋಗ್ಯ ಕಾಯ್ದುಕೊಳ್ಳಲು ಅವಶ್ಯವಿದ್ದಷ್ಟೇ ಆಹಾರ ಸೇವಿಸುವ, ಹಿತಮಿತವಾದ ವ್ಯಾಯಾಮ ಮತ್ತು ದೈಹಿಕ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳುವ ಮೂಲಕ ಮೊಬೈಲ್ ಎಂಬ ಮಾಯಾಂಗನೆಯ ಸೆರೆ ಬಿಡಿಸಿಕೊಂಡು ಸಾರ್ಥಕ ಬದುಕನ್ನು ಸಾಗಿಸೋಣ ಎಂಬ ಸಂಕಲ್ಪದೊಂದಿಗೆ..





– ವೀಣಾ ಹೇಮಂತಗೌಡ ಪಾಟೀಲ್ ಮುಂಡರಗಿ – ಗದಗ



---

**ವಿಭಾಗ, ರಾಜ್ಯ ಮಟ್ಟದ ಖೋಖೋ ಪಂದ್ಯಾವಳಿಗೆ ಆಲಮಟ್ಟಿ ಸಕಲ ರೀತಿಯಿಂದ ಸಜ್ಜು**

# ಆಲಮಟ್ಟಿ: ಇಂದಿನಿಂದ ರಾಜ್ಯ ಮಟ್ಟದ ಖೋಖೋ ಪಂದ್ಯಾವಳಿ

■ ಉದಯರಶ್ಮಿ ದಿನಪತ್ರಿಕೆ

ಆಲಮಟ್ಟಿ: ಬೆಳಗಾವಿ ವಿಭಾಗ ಮತ್ತು ರಾಜ್ಯ ಮಟ್ಟದ ಖೋಖೋ ಪಂದ್ಯಾವಳಿಗೆ ಆಲಮಟ್ಟಿಡ್ಯಾಂಸೈಟ್ ನ ಶಾಲಾ ಮೈದಾನ ಸಜ್ಜಾಗಿದ್ದು, ನ.12 ರಂದು ವಿಭಾಗ ಮಟ್ಟ ಹಾಗೂ ನ.14 ರಂದು ರಾಜ್ಯ ಮಟ್ಟದ ಸ್ಪರ್ಧೆಗಳು ನಡೆಯಲಿವೆ.

ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆಯ 14 ವಯೋಮಾನ (ಪ್ರಾಥ-'ಮಿಕ ಶಾಲೆ)ದ ಬೆಳಗಾವಿ ವಿಭಾಗ ಮಟ್ಟದ ಕ್ರೀಡಾಕೂಟಕ್ಕೆ ನ.11 ರಂದು 9 ಜಿಲ್ಲೆಗಳ ಕ್ರೀಡಾಪಟುಗಳು ಬರಲಿದ್ದು, ನ.12 ರ ಬೆಳಿಗ್ಗೆ 7.30 ರಿಂದಲೇ ಸ್ಪರ್ಧೆಗಳು ಜರುಗಲಿವೆ. ಅದೇ ದಿನ ವಿಭಾಗ ಮಟ್ಟದ ಸ್ಪರ್ಧೆಗಳು ಪೂರ್ಣಗೊಳ್ಳಲಿವೆ.

**ರಾಜ್ಯ ಮಟ್ಟದ ಉದ್ಘಾಟನೆ:**

ರಾಜ್ಯ ಮಟ್ಟದ ಖೋಖೋ ಪಂದ್ಯಾವಳಿಗೆ ರಾಜ್ಯದ ನಾನಾ ಭಾಗಗಳಿಂದ ನ,.13 ರಂದು ಕ್ರೀಡಾಪಟುಗಳು ಆಗಮಿಸಲಿದ್ದು, ಆ ದಿನ ನೋಂದಣಿ ನಡೆಯಲಿದೆ. 14 ವಯೋಮಾನದೊಳಗಿನ (ಪ್ರಾಥಮಿಕ ಶಾಲಾ ಹಂತ) ಹಾಗೂ 17 ವಯೋಮಾನದೊಳಗಿನ (ಪ್ರೌಢಶಾಲಾ ಹಂತ) ಬಾಲಕ/ಬಾಲಕಿಯರ ರಾಜ್ಯಮಟ್ಟದ ಖೋಖೋ ಪಂದ್ಯಾವಳಿಗಳು ನ.13 ರಂದು ಸಂಜೆ 6 ಕ್ಕೆ ಉದ್ಘಾಟನೆ ಕಾರ್ಯಕ್ರಮ ಜರುಗಲಿದೆ. ಸಚಿವರು, ಜನಪ್ರತಿನಿಧಿಗಳು, ಅಧಿಕಾರಿಗಳು ಆಗಮಿಸಲಿದ್ದಾರೆ. ಅದ್ಧೂರಿ ಉದ್ಘಾಟನೆಗೆ ಎಲ್ಲಾ ಸಿದ್ಧತೆ ಮಾಡಿಕೊಳ್ಳಲಾಗಿದೆ. ನ.14 ರಂದು ರಾಜ್ಯ ಮಟ್ಟದ ಸ್ಪರ್ಧೆಗಳು ಬೆಳಿಗ್ಗೆ 7.30 ರಿಂದಲೇ ಆರಂಭಗೊಳ್ಳಲಿವೆ. ಸಂಜೆಯ ವೇಳೆಗೆ ಸ್ಪರ್ಧೆಗಳು ಪೂರ್ಣಗೊಳ್ಳಲಿವೆ.

ವಸತಿ ವ್ಯವಸ್ಥೆ: ವಿಭಾಗ ಹಾಗೂ ರಾಜ್ಯ ಮಟ್ಟದ ಸ್ಪರ್ಧೆಗೆ ಎಲ್ಲಾ ಬಾಲಕ-ರಿಗೆ ಸಮೀಪದ ಯಲಗೂರದ ಯಾತ್ರಿ ನಿವಾಸದಲ್ಲಿ, ಬಾಲಕಿಯರಿಗೆ ಆಲಮಟ್ಟಿಯ ಜವಾಹರ ನವೋದಯ ವಿದ್ಯಾಲಯದಲ್ಲಿ ವಸತಿ ವ್ಯವಸ್ಥೆ ಮಾಡಲಾಗಿದೆ. ಊಟ: ಎಲ್ಲಾ ಕ್ರೀಡಾಪಟುಗಳಿಗೆ, ಅಧಿಕಾರಿಗಳಿಗೆ ಕ್ರೀಡಾಕೂಟ ನಡೆಯುವ ಮೈದಾನದ ಪಕ್ಕದ ಶಾಲೆಯಲ್ಲಿ ಹಾಗೂ ಕ್ರೀಡಾಭಿಮಾನಿಗಳಿಗೆ ಶ್ರೀ ರಾಮಲಿಂಗೇಶ್ವರ ದೇವಸ್ಥಾನದ ಆವರಣದಲ್ಲಿ ಮಾಡಲಾಗಿದೆ. ಕಡಕ್ ರೊಟ್ಟಿ, ಚಪಾತಿ, ಬದನೆಕಾಯಿ ಪಲ್ಯೆ, ಶೇಂಗಾ ಹೋಳಿಗೆ ಸೇರಿದಂತೆ ನಾಲ್ಕು ದಿನ ಹತ್ತಾರು ಬೇರೆ ಬೇರೆ ತರಹದ ಊಟದ ವ್ಯವಸ್ಥೆ ಮಾಡಲಾಗಿದ್ದು, ಅದಕ್ಕಾಗಿ 15 ಕ್ಕೂ ಹೆಚ್ಚು ಶಿಕ್ಷಕರು ಕಾರ್ಯನಿರ್ವಹಿಸುತ್ತಿದ್ದಾರೆ.

ಸ್ಕೌಟ್ಸ್ ಮತ್ತು ಗೈಡ್ಸ್ ವಿದ್ಯಾರ್ಥಿಗಳು ಸ್ವಯಂ ಸೇವಕರಾಗಿ ಕಾರ್ಯನಿರ್ವಹಿಸುತ್ತಿದ್ದಾರೆ. 25 ಕ್ಕೂ ಅಧಿಕ ಪೊಲೀಸ್ ರನ್ನು ನಾಲ್ಕು ದಿನ ಕ್ರೀಡಾಕೂಟದ ಭದ್ರತೆಗೆ ನಿಯೋಜಿಸಲಾಗಿದೆ ಎಂದು ಆಲಮಟ್ಟಿ ಪಿಎಸ್ ಐ ಎ.ಎಸ್. ಇಂಡಿಕರ ತಿಳಿಸಿದರು. ರಾಜ್ಯದ ಬೇರೆ ಬೇರೆ ಜಿಲ್ಲೆಗಳ 50 ಕ್ಕೂ ಅಧಿಕ ದೈಹಿಕ ಶಿಕ್ಷಣ ಶಿಕ್ಷಕರು ನಿರ್ಣಾಯಕರಾಗಿ ಆಗಮಿಸಲಿದ್ದಾರೆ.



ಆಲಮಟ್ಟಿ: ಇಂದಿನಿಂದ ರಾಜ್ಯ ಮಟ್ಟದ ಖೋಖೋ ಪಂದ್ಯಾವಳಿ

"ಈ ಭಾಗದಲ್ಲಿ ನಡೆಯುತ್ತಿರುವ ಮೊದಲ ರಾಜ್ಯ ಮಟ್ಟದ ಕ್ರೀಡಾಕೂಟ ಇದು, ಹೀಗಾಗಿ ಅವಿಸ್ಮರಣೀಯಗೊಳಿಸಲು 12 ಕ್ಕೂ ಅಧಿಕ ಸಮಿತಿಗಳನ್ನು ರಚಿಸಲಾಗಿದ್ದು, 50 ಕ್ಕೂ ಅಧಿಕ ಶಿಕ್ಷಕರ ಬಳಗ ಹಗಲಿರುಳು ಕಾರ್ಯನಿರ್ವಹಿಸುತ್ತಿದೆ, ಮೇಲಾಧಿಕಾರಿಗಳು ಅಗತ್ಯ ಮಾರ್ಗದರ್ಶನ ನೀಡುತ್ತಿದ್ದಾರೆ."

■ - ಚಂದ್ರಶೇಖರ ನುಗ್ಗಲಿ
ಕಾರ್ಯಕ್ರಮ ಸಂಘಟಕ,
ರಾಜ್ಯ ಪ್ರ.ಕಾರ್ಯದರ್ಶಿ
ಶಿಕ್ಷಕರ ಸಂಘ, ಬೆಂಗಳೂರು

### ಮೈದಾನದ ಸಿದ್ಧತೆ

**ಕಳೆದ 20 ದಿನಗಳಿಂದ ತಾಲ್ಲೂಕಿನ ನಾನಾ ಕಡೆಯಿಂದ ಆಗಮಿಸಿರುವ 25 ಕ್ಕೂ ಅಧಿಕ ದೈಹಿಕ ಶಿಕ್ಷಣ ಶಿಕ್ಷಕರು ಮೈದಾನದ ಸಿದ್ಧತೆಯಲ್ಲಿ ತೊಡಗಿಕೊಂಡಿದ್ದಾರೆ. ಕಟ್ಟಿಗೆಯ ಹೊಟ್ಟು ಹಾಗೂ ಕೆಂಪು ಮಣ್ಣು ತರಿಸಿ, 4 ಖೋಖೋ ಮೈದಾನ ನಿರ್ಮಿಸಲಾಗಿದ್ದು, ಕ್ರೀಡಾಪಟುಗಳು ಹಾಗೂ ನಿರ್ಣಾಯಕರು ಮಾತ್ರ ಮೈದಾನದಲ್ಲಿರುವಂತೆ ಮೈದಾನದ ಸುತ್ತಲೂ ಬ್ಯಾರಿಕೇಡ್ ಅಳವಡಿಸಲಾಗಿದೆ. ಮೂರು ಎಕರೆ ವಿಸ್ತೃತ ಮೈದಾನವನ್ನು ಸುತ್ತಲೂ ವಿದ್ಯುತ್ ದೀಪದಿಂದ ಕಂಗೊಳಿಸುವಂತೆ ದೀಪಾಲಂಕಾರ ಮಾಡಲಾಗಿದೆ. ಎರಡು ಬೃಹತ್ ಪೆಡ್ ಲೈಟ್ ವ್ಯವಸ್ಥೆ, ಕ್ಯಾಮರಾ ಕಣ್ಗಾವಲು ಇರಲಿದೆ. ನಾಲ್ಕು ಎಲ್ ಇಡಿ ಪರದೆ ಅಳವಡಿಸಲಾಗಿದ್ದು, ಅದರ ಮೂಲಕವೂ ಖೋಖೋ ಪಂದ್ಯಾವಳಿ ನೇರವಾಗಿ ವೀಕ್ಷಿಸಬಹುದು. ಪ್ರತಿ ಕ್ರೀಡಾಪಟುವಿಗೆ ಮೈದಾನದಲ್ಲಿಯೇ ಶಾಲು ಹೊದಿಸಿ ಸನ್ಮಾನಿಸಲಾಗುತ್ತಿದ್ದು, ಅವರಿಗೆ ಹಣ್ಣು, ನೀರಿನ ವ್ಯವಸ್ಥೆ ನಿರಂತರ ಇರಲಿದೆ.**

---

# ವೃಕ್ಷೋಥಾನ್ ಹೆರಿಟೇಜ್ ರನ್–2024: ಜನಜಾಗೃತಿ ಜಾಥಾ

■ ಉದಯರಶ್ಮಿ ದಿನಪತ್ರಿಕೆ

ವಿಜಯಪುರ: ವೃಕ್ಷೋಥಾನ್ ಹೆ-ರಿಟೇಜ್ ರನ್–2024 ಅಂಗವಾಗಿ ಕೋರ್ ಕಮಿಟಿ ಮತ್ತು ವಿಜಯಪುರ ಸೈಕ್ಲಿಂಗ್ ಗ್ರುಪ್ ಪದಾಧಿಕಾರಿಗಳು ಇಂದು ರವಿವಾರ ಬೆಳಿಗ್ಗೆ ನಗರದಲ್ಲಿ ಜನಜಾಗೃತಿ ಜಾಥಾ ನಡೆಸಿದರು. ಡಾ. ಬಿ.ಆರ್.ಅಂಬೇಡ್ಕರ್ ಜಿಲ್ಲಾ ಕ್ರೀಡಾಂಗಣದಿಂದ ಸೈಕ್ಲಿಂಗ್ ಮತ್ತು ಓಟದಲ್ಲಿ ಪಾಲ್ಗೊಂಡ ನೂರಾರು ಯುವಕರು ಮತ್ತು ಮಕ್ಕಳು ಐತಿಹಾಸಿಕ ಗೋಳಗುಮ್ಮಟದಲ್ಲಿ ಸೇರಿ ವೃಕ್ಷೋಥಾನ್, ಪರಿಸರ, ಪ್ರಾಚೀನ ಸ್ಮಾರಕಗಳ ಸಂರಕ್ಷಣೆ ಹಾಗೂ ಪ್ರವಾಸೋದ್ಯಮ ಪರ ಘೋಷಣೆ ಹಾಕಿದರು. ಅಲ್ಲದೇ, ಡಿಸೆಂಬರ್ 22 ರಂದು ನಗರದಲ್ಲಿ ನಡೆಯಲಿರುವ ಹೆರಿಟೇಜ್ ರನ್ ನಲ್ಲಿ ಪಾಲ್ಗೊಳ್ಳುವಂತೆ ಪ್ರವಾಸಿಗರು ಮತ್ತು ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸಿದರು.



ನಂತರ ಗೋಳಗುಮ್ಮಟದಿಂದ ತೆರಳಿ ಅಂಬೇಡ್ಕರ್, ಬಸವೇಶ್ವರ ಹಾಗೂ ಗಾಂಧಿ ಚೌಕ್ ಮೂಲಕ ಮರಳಿ ಜಿಲ್ಲಾ ಕ್ರೀಡಾಂಗಣ-ಕ್ಕೆ ಜಾಥಾ ಮೂಲಕ ಆಗಮಿಸಿದರು.ಈ ಸಂದರ್ಭದಲ್ಲಿ ಡಾ. ಮಹಾಂತೇಶ ಬಿರಾದಾರ, ಡಾ.ಮುರುಗೇಶ ಪಟ್ಟಣಶೆಟ್ಟಿ, ಸಂಕೇತ ಬಗಲಿ, ವೀರೇಂದ್ರ ಗುಚ್ಚಟ್ಟಿ, ಅಪ್ಪು ಭೈರಗೊಂಡ, ಶಿವನಗೌಡ ಪಾಟೀಲ, ಅಶ್ಫಾಕ ಮನಗೂಳಿ, ಸೋಮಶೇಖರ ಸ್ವಾಮಿ, ಅನೀಲ ಧಾರವಾಡಕರ, ಸಂತೋಷ ಔರಸಂಗ, ಗುರುಶಾಂತ ಕಾಪಸೆ, ಶ್ರೀಕಾಂತ ಮಂತ್ರಿ, ಡಿ.ಕೆ.ತಾವಸೆ, ಶಿವರಾಜ ಪಾಟೀಲ, ಮಹೇಶ ವಿ. ಶಟಗಾರ, ಉಮೇಶ ಮೆಟಗಾರ, ವೀಣಾ ದೇಶಪಾಂಡೆ ಮುಂತಾದವರು ಉಪಸ್ಥಿತರಿದ್ದರು.

---

# ಬಾಲಕಿಯರ ವಸತಿ ನಿಲಯಕ್ಕೆ ನ್ಯಾಯಾಧೀಶರ ಭೇಟಿ :ಪರಿಶೀಲನೆ



■ ಉದಯರಶ್ಮಿ ದಿನಪತ್ರಿಕೆ

ಮುದ್ದೇಬಿಹಾಳ: ಪಟ್ಟಣದ ಹುಡ್ಕೋ ಬಡಾವಣೆಯಲ್ಲಿರುವ ಡಾ.ಬಿ.ಆರ್.ಅಂಬೇಡ್ಕರ್ ಸರಕಾರಿ ಮೆಟ್ರಿಕ್ ನಂತರದ ಬಾಲಕಿಯರ ವಸತಿ ನಿಲಯಕ್ಕೆ ಇಲ್ಲಿನ ಹಿರಿಯ ಶ್ರೇಣಿ ಸಿವಿಲ್ ನ್ಯಾಯಾಧೀಶರಾದ ರವೀಂದ್ರಕುಮಾರ ಕಟ್ಟಿಮನಿ ಮತ್ತು ಕಿರಿಯ ಶ್ರೇಣಿ ಸಿವಿಲ್ ನ್ಯಾಯಾಧೀಶರಾದ ಸಂಪತ್ತಕುಮಾರ ಭೇಟಿ ನೀಡಿ ಪರಿಶೀಲಿಸಿದರು.

ವಸತಿ ನಿಲಯದ ಆಡಳಿತದ ಬಗ್ಗೆ ವಿದ್ಯಾರ್ಥಿನಿಯರಿಗೆ ವಿಚಾರಿಸಿದ ಉಭಯ ನ್ಯಾಯಾಧೀಶರು ಯಾವತ್ತೂ ಕೋಣೆಗಳನ್ನು ಸ್ವಚ್ಛವಾಟ್ಟುಕೊಳ್ಳುವಂತೆ, ವಿದ್ಯಾಭ್ಯಾಸದಲ್ಲಿ ಹೆಚ್ಚಿನ ಕಾಳಜಿ ಮತ್ತು ಸಮಯ ಕಳೆಯುವಂತೆ ಸಲಹೆ ನೀಡಿದರು. ಅಡುಗೆ ಕೋಣೆ ಸೇರಿದಂತೆ ಹಲವು ಕೋಣೆಗಳಲ್ಲಿ ಖುದ್ದು ತಿರುಗಾಡಿ ವ್ಯವಸ್ಥೆಯ ಬಗ್ಗೆ ಪರಿಶೀಲಿಸಿದರು. ಕುಡಿಯುವ ನೀರಿನ ಶುದ್ಧತೆ ಅಡುಗೆ ಶುಚಿತ್ವ ಕುರಿತ ಮಾಹಿತಿ ಪಡೆದು ವಿದ್ಯಾರ್ಥಿಗಳಿಗೆ ಸಿಗಬೇಕಾದ ಎಲ್ಲ ಸೌಲಭ್ಯಗಳನ್ನು ಸರಿಯಾಗಿ ತಲುಪಿಸುವಂತೆ ವಾರ್ಡನ್ ಗೆ ಸೂಚಿಸಿದರು.

ಈ ವೇಳೆ ಸಮಾಜ ಕಲ್ಯಾಣ ಇಲಾಖೆಯ ಅಧಿಕಾರಿಣಿ ಬಿ.ಜಿ.ಮಠ, ವಾರ್ಡನ್ ಎಸ್.ಆರ್.ಬಿರಾದಾರ, ತಹಶೀಲ್ದಾರ ಕಚೇ-ರಿಯ ಶಿರಸ್ತೇದಾರ ಎಂ.ಎ.ಬಾಗೇವಾಡಿ, ತಾಲೂಕು ಪಂಚಾಯತ ನ ನಿರ್ಮಲಾ ತೋಟದ, ನ್ಯಾಯವಾದಿಗಳ ಸಂಘದ ಪ್ರ.ಕಾರ್ಯದರ್ಶಿ ಪಿ.ಬಿ.ಗೌಡರ, ನ್ಯಾಯಾಲಯದ ಸಿಬ್ಬಂದಿಗಳಾದ ಅರವಿಂದ ಕುಂಬಾರ, ಮಹಾಂತೇಶ ಹಚರೆಡ್ಡಿ ಸೇ-ರಿದಂತೆ ಮತ್ತಿತರರು ಇದ್ದರು.

---

# ಶ್ರೀ ಅಂಬಾಭವಾನಿ ದೇವಸ್ಥಾನದ 3ನೇ ವಾರ್ಷಿಕೋತ್ಸವ



■ ಉದಯರಶ್ಮಿ ದಿನಪತ್ರಿಕೆ

ಮುದ್ದೇಬಿಹಾಳ:ಪಟ್ಟಣದ ಲಕ್ಷ್ಮೀಚಿತ್ರಮಂದಿರದ ಹಿಂಬದಿ ಇರುವ ಶ್ರೀ ಅಂಬಾಭವಾನಿ ದೇವಸ್ಥಾನದ 3ನೇ ವರ್ಷದ ವಾರ್ಷಿಕೋತ್ಸವವನ್ನು ರವಿವಾರ ಶ್ರದ್ಧಾ ಭಕ್ತಿಯಿಂದ ಆಚರಿಸಲಾಯಿತು. ನಸುಕಿನ ಜಾವ ದೇವಿಗೆ ವಿಶೇಶ ಅಭಿಷೇಕ, ಮಹಾ ಮಂಗಳಾರುತಿ ನೆರವೇರಿಸಿ ದೇವಿಯ ಮೂರ್ತಿಯನ್ನು ಕಿಲ್ಲಾದಲ್ಲಿನ ಲಕ್ಷ್ಮೀ ಭಾವಿಗೆ ಕರೆದೊಯ್ದು ಪವಿತ್ರ ಗಂಗೆಯಲ್ಲಿ ದೇವಿಯ ಮೂರ್ತಿಗೆ ಸ್ನಾನಾಧಿ ಕಾರ್ಯಗಳನ್ನು ಮುಗಿಸಿ ವಿಶೇಷ ಮೆರವಣಿಗೆ ಮೂಲಕ ದೇವಸ್ಥಾನಕ್ಕೆ ಕರೆತರಲಾಯಿತು. ಬಳಿಕ ಸತ್ಯನಾರಾಯಣ ಪೂಜೆ, ಮಹಾ ಮಂಗಳಾರುತಿ, ಸದ್ಭಕ್ತರಿಗೆ ಮಹಾಪ್ರಸಾದ ನೆರವೇರಿಸಿ ವಾರ್ಷಿಕೋತ್ಸವವನ್ನು ಸಂಪನ್ನಗೊಳಿಸಲಾಯಿತು.ಪೂಜಾಧಿಕಾರ್ಯಗಳನ್ನು ಪುರೋಹಿತರಾದ ಕಿಟ್ಟು ಅಗ್ನಿಹೋತ್ರಿ ಮತ್ತು ಪವನ ಕುಲಕರ್ಣಿ ನೆರವೇರಿಸಿದರು. ಪ್ರಮುಖರಾದ ಭರತ ಭೋಸಲೆ, ರಾಜೇಂದ್ರ ಭೋಸಲೆ, ಹಣಮಂತ ನಲವಡೆ, ಮಾರುತಿ ನಲವಡೆ, ಶಿವು ಬಿಜಾಪೂರ, ಸಚೀನ ಸಾಳುಂಕೆ, ಲೋಹಿತ ಘಾಟಗೆ, ಸಂತೋಷ ಚೌವ್ಹಾಣ, ಭೀಮಾಜಿ ಘಾಟಗೆ, ರಾಘವೇಂದ್ರ ಘಾಟಗೆ, ವಿಶ್ವನಾಥ ಸಿಂಧೆ, ರವಿ ನಲವಡೆ, ಕಿರಣ ದುದಾನಿ, ಅಣ್ಣಾಜಿ ಪವಾರ, ರಾಜು ಜಾಧವ, ಅಂಬಾಜಿ ಘಾಟಗೆ, ಗಣೇಶ ಘಾಟಗೆ, ತಾನಾಜಿ ಜಕತಾಪ, ರಾಹುಲ ಕನಸೆ, ಶಂಕರ ಪವಾರ, ಸಂದೀಪ ಸಾಳುಂಕೆ, ಅಮಿತ ಗಾಯಕವಾಡ, ವಿನೋದ ಪವಾರ, ವಿನಾಯಕ ಘಾಟಗೆ, ಅಮರ ಭೋಸಲೆ, ಲೋಹಿತ ಘಾಟಗೆ, ಅಣ್ಣಾಜಿ ಪವಾರ, ಗಜಾನನ ನಲವಡೆ, ಅಂಬಾಜಿ ಘಾಟಗೆ ಸೇರಿದಂತೆ ಮತ್ತೀತರರು ಇದ್ದರು.

# ಒತ್ತಡದ ಬದುಕಿನಲ್ಲಿ ನಗು ಮಾಯ :ಪ್ರಭು ಶ್ರೀ



■ ಉದಯರಶ್ಮಿ ದಿನಪತ್ರಿಕೆ

ಚಿಮ್ಮಡ: ಇಂದಿನ ಒತ್ತಡದ ಬದುಕಿನಲ್ಲಿ ನಗುವು ಮಾಯವಾಗಿದ್ದು, ಆರೋಗ್ಯದ ಮೂಲವಾಗಿರುವ ನಗುವು ತರಿಸುವ ಮನರಂಜನಾ ಕಾರ್ಯಕ್ರಮಗಳು ಇಂದಿನ ಅವಶ್ಯಕವಾಗಿವೆ ಎಂದು ಚಿಮ್ಮಡ ವಿರಕ್ತಮಠದ ಶ್ರೀ ಪ್ರಭು ಮಹಾಸ್ವಾಮಿಗಳು ಹೇಳಿದರು.

ಗ್ರಾಮದ ರಘುನಾಥ ಪ್ರೀಯ ಸಾಧು ಮಹಾರಾಜರ ಜಾತ್ರೆಯ ನಿಮಿತ್ತ ಹಮ್ಮಿಕೊಳ್ಳಲಾಗಿದ್ದ ಅರುಣೋದಯ ಗ್ರಾಮೀಣಾಭಿವೃದ್ಧಿ ಸಂಸ್ಥೆ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಂಯುಕ್ತ ಆಶ್ರಯದಲ್ಲಿ ಹಮ್ಮಿಕೊಳ್ಳಲಾಗಿದ್ದ "ಅರುಣೋತ್ಸವ-2024' ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಅವರು ನಗು ಮನಸ್ಸಿನ ಒತ್ತಡವನ್ನು ಕಡಿಮೆ ಮಾಡಿ ಆರೋಗ್ಯವನ್ನು ಸಮಸ್ಥಿತಿಯಲ್ಲಿಡಲು ಸಹಕಾರಿಯಾಗಿದೆ, ನಗುವಿನಿಂದ ಆಯುಷ್ಯವೃದ್ಧಿಯಾಗುತ್ತದೆ ಎಂದರು.

ಕಾರ್ಯಕ್ರಮದ ಸಾನಿಧ್ಯವನ್ನು ಓಂಕಾರ ಮಹಾರಾಜರು ವಹಿಸಿದ್ದರು. ಸಂಸ್ಥೆಯ ಅಧ್ಯಕ್ಷ ಕಲ್ಲುಗೌಡ ಪಾಟೀಲ ಅಧ್ಯಕ್ಷತೆ ವಹಿಸಿದ್ದರು.

ಮುಖ್ಯ ಅಥಿತಿಗಳಾಗಿ ರಬಕವಿ-ಬನಹಟ್ಟಿ ನಗರ ಪ್ರಾಧಿಕಾರದ ಮಾಜಿ ಅಧ್ಯಕ್ಷ ದುಂಡಪ್ಪಾ ಕರಿಗಾರ, ಸಂಗಮೇಶ ಬಾಬಾಗೌಡ ಪಾಟೀಲ, ನ್ಯಾಯವಾದಿ ಮಹೇಶ ಸಿಂಗಿ, ನಂದಕುಮಾರ, ಪಿಕೆಪಿಎಸ್ ಅಧ್ಯಕ್ಷ ಹಣಮಂತ ನೇಸೂರ, ಗ್ರಾ.ಪಂ. ಮಾಜಿ ಅಧ್ಯಕ್ಷ ಶಂಕರ ಬಟಕುರ್ಕಿ, ಅಶೋಕ ಮೋಟಗಿ, ಪ್ರಭು ಮುಧೋಳ, ಮಹಾಲಿಂಗ ಮಾಯಣ್ಣವರ, ರಾಜು ಬಗನಾಳ, ಗ್ರಾಮ ಆಡಳಿತ ಅಧಿಕಾರಿ ಮಂಜುನಾಥ ನೀಲನ್ನವರ, ಸದಾಶೀವ ಕುಂಬಾರ, ಅರಭಾಜ ಜಮಖಂಡಿ, ವೇದಿಕೆಯಲ್ಲಿ ಉಪಸ್ಥಿತರಿದ್ದರು.

ಖಾಸಗಿ ವಾಹಿನಿಯಲ್ಲಿ ಪ್ರಸಾರವಾಗುವ ಕಾಮಿಡಿ ಕಿಲಾಡಿಗಳು ಶೋ ವಿಜೇತ ಹರೀಶ ಹಿರಿಯೂರು, ಜಗ್ಗಪ್ಪ ಬೆಂಗಳೂರುರವರ ಕಾಮಿಡಿ ಪಂಚ್‌ಗೆ ಪ್ರೇಕ್ಷಕರು ಫಿದಾ ಆದರು, ಇದೇ ಸಂಧರ್ಭದಲ್ಲಿ ರಾಷ್ಟ್ರೀಯ ಕೃಷಿ ಪ್ರಶಸ್ತಿ ವಿಜೇತ ನಿಂಗಣ್ಣ ಪೂಜಾರಿ, ಮಹಾಲಿಂಗಪುರದ ವೈದ್ಯ ಡಾ. ಎ.ಆರ್. ಬೆಳಗಲಿ, ಆದರ್ಶ ಶಿಕ್ಷಕಿ ಪ್ರಶಸ್ತಿ ವಿಜೇತ ಸರಕಾರಿ ಪ್ರೌಢ ಶಾಲೆಯ ಮುಖ್ಯ ಶಿಕ್ಷಕಿ ಶ್ರೀಮತಿ ಎಂ.ಎಸ್. ಜಿಟ್ಟಿ, ವಿಶೇಷ ಸಾಧನೆಗೈದ ವಿದ್ಯಾರ್ಥಿನಿಯರನ್ನು ಸತ್ಕರಿಸಿ ಗೌರವಿಸಲಾಯಿತು.

ಸಂಸ್ಥೆಯ ಉಪಾಧ್ಯಕ್ಷ ಪೈಗಂಬರ ಯಾದವಾಡ, ಪ್ರವೀಣ ಮೈತ್ರಿ, ಲಕ್ಷ್ಮಣ ತಿಮ್ಮಾಪೂರ, ಗುರುಪಾದ ನೇಸೂರ, ಸದಾಶಿವ ಉರಭಿನವರ, ಮಹಾಂತೇಶ ಯಂಕಂಚಿ, ಮಹಾದೇವ ಕೋಳಿ, ಮಹಾಂತೇಶ ಧಡೂತಿ, ಅಲ್ಲಾವುದ್ದೀನ ನದಾಫ, ರಾಘವೇಂದ್ರ ಬಡಿಗೇರ ಉಪಸ್ಥಿತರಿದ್ದರು. ಶಿಕ್ಷಕರಾದ ಪ್ರಕಾಶ ಪುಜಾರಿ ಸ್ವಾಗತಿಸಿ ನಿರೂಪಿಸಿದರು, ಉಪನ್ಯಾಸಕ ಪ್ರಕಾಶ ಬಡಿಗೇರ ವಂದಿಸಿದರು.

# ಕಾನೂನು ಸೇವಾ ಪ್ರಾಧಿಕಾರದ ಸದುಪಯೋಗ ಪಡೆದುಕೊಳ್ಳಿ

■ ಉದಯರಶ್ಮಿ ದಿನಪತ್ರಿಕೆ



ಮುದ್ದೇಬಿಹಾಳ: ನ್ಯಾಯದಿಂದ ವಂಚಿತರಾಗುತ್ತಿರುವ ಮಹಿಳೆಯರು, ಹಿಂದುಳಿದ ವರ್ಗದವರು ಸೇರಿದಂತೆ ಬಡವರಿಗೆ ಕಾನೂನಿನ ನೆರವು ನೀಡುವ ಉದ್ದೇಶದಿಂದ ರಾಷ್ಟ್ರೀಯ ಕಾನೂನು ಸೇವಾ ಪ್ರಾಧಿಕಾರವನ್ನು ಪ್ರಾರಂಭಿಸಲಾಗಿದೆ.ಇದರ ಸದುಪಯೋಗ ಪಡೆದುಕೊಳ್ಳುವಂತೆ ತಾಲೂಕು ಕಾನೂನು ಸೇವಾ ಸಮಿತಿಯ ಅಧ್ಯಕ್ಷರು ಹಾಗೂ ಹಿರಿಯ ಸಿವಿಲ್ ನ್ಯಾಯಾಧೀಶರಾದ ರವೀಂದ್ರಕುಮಾರ ಕಟ್ಟಿಮನಿ ಕರೆ ನೀಡಿದರು. ಪಟ್ಟಣದ ಹುಡ್ಕೋ ಬಡಾವಣೆಯಲ್ಲಿರುವ ಫಂಕ್ಷನ್ ಹಾಲ್ ನಲ್ಲಿ ತಾಲೂಕು ಕಾನೂನು ಸೇವಾ ಸಮಿತಿ, ನ್ಯಾಯವಾದಿಗಳ ಸಂಘ,ಸಮಾಜ ಕಲ್ಯಾಣ ಇಲಾಖೆ ಹಾಗೂ ಇತರ ಎಲ್ಲ ಸರಕಾರಿ ಇಲಾಖೆಗಳ ಸಂಯುಕ್ತ ಆಶ್ರಯದಲ್ಲಿ ಹಮ್ಮಿಕೊಳ್ಳಲಾಗಿದ್ದ ರಾಷ್ಟ್ರೀಯ ಕಾನೂನು ಸೇವೆಗಳ ದಿನಾಚರಣೆ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು. ನ್ಯಾಯಾಲಯಗಳು, ನ್ಯಾಯ ಮಂಡಳಿಗಳು ಸೇರಿದಂತೆ ವಿವಿಧ ಪ್ರಾಧಿಕಾರಗಳಲ್ಲಿರುವ ಪ್ರಕರಣಗಳನ್ನು ನಡೆಸಲು ನ್ಯಾಯವಾದಿಗಳ ಸಹಾಯ ಅವಶ್ಯ. ವಕೀಲರ ನೇಮಕ ಮಾಡಿಕೊಳ್ಳಲು ಆರ್ಥಿಕವಾಗಿ ದುರ್ಬಲರಿದ್ದಲ್ಲಿ ಅಂಥವರು ಕಾನೂನು ಸೇವಾ ಪ್ರಾಧಿಕಾರದ ಸೇವೆ ಪಡೆಯಬಹುದು. ಈ ಸೇವೆ ಪಡೆಯಲು ಪ್ರತೀ ನ್ಯಾಯಾಲಯಗಳಲ್ಲಿ ಕಾನೂನು ಸೇವಾ ಪ್ರಾಧಿಕಾರದ ಕಚೇರಿಗೆ ಬೇಟಿ ನೀಡಿ ಸೇವೆ ಪಡೆಯಬಹುದು. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರು, ಮಹಿಳೆಯರು, ವಿಪತ್ತಿಗೆ ಒಳಗಾದವರು, ಮಾನಸಿಕ ಅಸ್ವಸ್ಥರು, ವಾರ್ಷಿಕ ಆದಾಯ ಒಂದು ಲಕ್ಷಕ್ಕಿಂತ ಕಡಿಮೆ ಇರುವವರು ಈ ಸೇವೆ ಪಡೆಯಬಹುದು ಎಂದರು.

ವಿಶೇಶ ಉಪನ್ಯಾಸಕರಾಗಿ ನ್ಯಾಯವಾದಿ ಎನ್.ಆರ್.ಮೊಕಾಶಿ ಮಾತನಾಡಿ, ಸಮಾಜದ ಕಟ್ಟ ಕಡೆಯ ವ್ಯಕ್ತಿಯೂ ನ್ಯಾಯದಿಂದ ವಂಚಿತರಾಗಬಾರದು ಅಂತಾ ಸಂವಿಧಾನದಲ್ಲಿ ತಿದ್ದುಪಡಿ ಮಾಡುವ ಮೂಲಕ ಕಾನೂನು ಸೇವಾ ಪ್ರಾಧಿಕಾರ ರಚಿಸಲಾಗಿದೆ. ಇದರ ಸದುಪಯೋಗ ಪಡೆದುಕೊಳ್ಳಲು ಸಾರ್ವಜನಿಕರು ಮುಂದಾಗಬೇಕು ಎಂದರು. ನ್ಯಾಯುವಾದಿಗಳ ಸಂಘದ ಪ್ರ.ಕಾರ್ಯದರ್ಶಿ ಪಿ.ಬಿ.ಗೌಡರ ಮಾತನಾಡಿ ಕಾನೂನು ಸೇವಾ ಪ್ರಾಧಿಕಾರದ ವತಿಯಿಂದ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವ ಮೂಲಕ ಸಾರ್ವಜನಿಕರಲ್ಲಿ ಕಾನೂನಿನ ಬಗ್ಗೆ ಸಾಕಷ್ಟು ತಿಳುವಳಿಕೆ ನೀಡಲಾಗುತ್ತಿದೆ. ಪ್ರತೀ ಮನುಷ್ಯನಿಗೆ ಹುಟ್ಟಿನಿಂದ ಶುರುವಾಗುವ ಕಾನೂನು ಅವನ ಅಂತ್ಯದವರೆಗೂ ಜೊತೆಗಿರುತ್ತದೆ. ಕಾನೂನುಗಳನ್ನು ತಿಳಿದುಕೊಂಡಲ್ಲಿ ಕೆಲಸ ಕಾರ್ಯಗಳಿಗೆ ಅಲೆದಾಡುವ ಪರಿಸ್ಥಿತಿ ಎದುರಾಗುವದಿಲ್ಲ ಎಂದರು. ಕಿರಿಯ ಶ್ರೇಣಿ ಸಿವಿಲ್ ನ್ಯಾಯಾಧೀಶರಾದ ಸಂಪತ್ತಕುಮಾರ ಬಳೂಲಗಿಡದ, ತಹಶೀಲ್ದಾರ ಕಚೇರಿಯ ಶಿರಸ್ತೆದಾರ ಎಂ.ಎ.ಬಾಗೇವಾಡಿ, ತಾಲೂಕು ಪಂಚಾಯತ ಮ್ಯಾನೇಜರ ನಿರ್ಮಲಾ ತೋಟದ, ನ್ಯಾ.ಸಂಘದ ಸಹ ಕಾರ್ಯದರ್ಶಿ ಬಿ.ಪಿ.ಮ್ಯಾಗೇರಿ, ನ್ಯಾಯವಾದಿ ಚೇತನ ಶಿವಶಿಂಪಿ, ನ್ಯಾಯಾಲಯದ ಸಿಬ್ಬಂದಿಗಳಾದ ಅರವಿಂದ ಕುಂಬಾರ, ಮಹಾಂತೇಶ ಹಚರೆಡ್ಡಿ, ಸಮಾಜ ಕಲ್ಯಾಣ ಇಲಾಖೆಯ ಸಹಾಯ ನಿರ್ದೇಶಕಿ ಬಿ.ಜಿ.ಮಠ, ವಾರ್ಡನ್ ಎಸ್.ಆರ್.ಬಿರಾದಾರ ಸೇರಿದಂತೆ ವಿದ್ಯಾರ್ಥಿಗಳು ಭಾಗಿಯಾಗಿದ್ದರು. ಶಿಕ್ಷಕ ಹಾಗೂ ಕಲಾವಿದ ಟಿ.ಡಿ.ಲಮಾಣಿ ಕಾರ್ಯಕ್ರಮ ನಿರ್ವಹಿಸಿದರು.

# ಮೇರು ವ್ಯಕ್ತಿತ್ವದ ವೀರ ಪರಾಕ್ರಮಿ ಟಿಪ್ಪು ಸುಲ್ತಾನ್

■ ಉದಯರಶ್ಮಿ ದಿನಪತ್ರಿಕೆ




ಕೆಂಭಾವಿ: ದೇಶ ಕಂಡ ಅಪ್ರತಿಮ ವೀರ ಸೇನಾನಿ, ದೇಶಪ್ರೇಮಿ, ಸ್ವಾತಂತ್ರ್ಯ ಹೋರಾಟಗಾರ, ಮೈಸೂರು ಹುಲಿ ಟಿಪ್ಪು ಸುಲ್ತಾನ್ ಎಂದು ಟಿಪ್ಪು ಸುಲ್ತಾನ ಸಂಘದ ಅಧ್ಯಕ್ಷ ಶಫೀಕ್ ದಫೇದಾರ್ ಹೇಳಿದರು.

ಪಟ್ಟಣದ ಟಿಪ್ಪು ಸುಲ್ತಾನ ವೃತ್ತದಲ್ಲಿ ಟಿಪ್ಪುಸುಲ್ತಾನ್ ಸಂಯುಕ್ತ ರಂಗ ವತಿಯಿಂದ ಶನಿವಾರ ಹಜರತ್ ಟಿಪ್ಪು ಸುಲ್ತಾನ ರವರ 275ನೇ ಜಯಂತೋತ್ಸವ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿದ ಅವರು ದಕ್ಷಿಣ ಭಾರತದ ಮೊದಲ ಮುಸಲ್ಮಾನ ದೊರೆ ಎಂದವರು, ಬ್ರಿಟಿಷರ ವಿರುದ್ಧ ಹೋರಾಡಿದ ಸ್ವಾತಂತ್ರ್ಯ ಸೇನಾನಿ ಟಿಪ್ಪು ಪರಧರ್ಮ ಸಹಿಷ್ಣುತೆ ಮತ್ತು ಸೌಹಾರ್ದತೆಯ ಮೇರು ವ್ಯಕ್ತಿತ್ವದ ವೀರ ಪರಾಕ್ರಮಿ ಎಂದರು. ಮುಖ್ಯ ಅತಿಥಿ ಶಹಪೂರಿನ ಯುವ ಮುಖಂಡ ನಯುಮ್ ಅಫಗಾನ ಮಾತನಾಡಿ ದೇಶದ ನೆಲ,ಜಲ,ನಾಡು, ನುಡಿ ರಕ್ಷಣೆಗಾಗಿ ತನ್ನ ಹೆತ್ತ ಮಕ್ಕಳನ್ನೇ ಒತ್ತೆಯಿಟ್ಟು ಶೌರ್ಯ ಪರಾಕ್ರಮವನ್ನು ಮೆಚ್ಚುವಂತದ್ದು ಇಂದಿನ ಯುವ ಪೀಳಿಗೆಗೆ ಅವರ ಆದರ್ಶಗಳನ್ನು ಮೈಗೂಡಿಸಿಕೊಳ್ಳಬೇಕು ಎಂದರು.ಮಾಜಿ ಜಿಲ್ಲಾ ಪಂಚಾಯಿತ ಅಧ್ಯಕ್ಷ ಸಿದ್ದನಗೌಡ ಪೊಲೀಸ್ ಪಾಟೀಲ ಧ್ವಜಾರೋಹಣ ನೆರವೇರಿಸಿದರು. ಮಹಿಪಾಲ್ ರೆಡ್ಡಿ ಡಿಗ್ಗಾವಿ ಟಿಪ್ಪು ಸುಲ್ತಾನ್ ಭಾವಚಿತ್ರಕ್ಕೆ ಮಾಲಾರ್ಪಣೆ ಮಾಡಿದರು. ಈ ಸಂದರ್ಭದಲ್ಲಿ, ಕಾಜಾ ಪಟೇಲ್ ಕಾಚೂರು, ಸಂಜೀವರಾವ್ ಕುಲಕರ್ಣಿ, ಕೆ.ಡಿ.ನಾಸಿ, ಮೈಬೂಬಸಾಬ್ ದಫೇದರ್, ಸೈಯದ್ ಹುಸೇನ್ ಮೌಲಾನ, ಗಾಲಿಬ್ ಖಾನ್ ಇನಾಮ್ದಾರ್, ರಫೀಕ್ ವಡಿಕೇರಿ ಬಿ.ಜೆಡ್, ನಾಲ್ತಾವಾಡ, ರಫೀಕ್ ಖಾಜಿ. ಆದಮ ನಾಸೀ, ರಾಜಾಕ ಸಾಸನೂರ, ಬಿ.ಕೆ.ನಾಶಿ, ಅಲ್ಲಾಬಕ್ಷ್ ಹುಳಬುತ್ತಿ, ನಯುಮ ಖಾಜಿ, ಹನೀಫ್ ಸಾಸನೂರ್, ಎಸ್.ಕೆ.ಮಹ್ಮದ ಖಾಜಿ, ಜಿಲಾನಿ ನಾಶಿ, ಬಾಬಾ ತಾಳಿಕೋಟಿ, ಇತರರು ಉಪಸ್ಥಿತರಿದ್ದರು

# ವಿವಿಧ ಮತಗಟ್ಟೆಗಳಿಗೆ ಜಿಲ್ಲಾಧಿಕಾರಿ ಟಿ.ಭೂಬಾಲನ್ ಭೇಟಿ, ಪರಿಶೀಲನೆ

■ ಉದಯರಶ್ಮಿ ದಿನಪತ್ರಿಕೆ

ವಿಜಯಪುರ: ಮತದಾರರ ಪಟ್ಟಿ ವಿಶೇಷ ಸಂಕ್ಷಿಪ್ತ ಪರಿಷ್ಕರಣೆಯ ಹಿನ್ನೆಲೆಯಲ್ಲಿ ಮತದಾರರ ಪಟ್ಟಿಯಲ್ಲಿ ಹೆಸರು ಸೇರ್ಪಡೆ, ತಿದ್ದುಪಡಿ, ವರ್ಗಾವಣೆ, ಹೆಸರು ತೆಗೆದು ಹಾಕುವ ಕುರಿತ ನವೆಂಬರ್ 9, 10, ಹಾಗೂ 23 ಮತ್ತು 24ರಂದು ಜಿಲ್ಲೆಯಲ್ಲಿ ನಾಲ್ಕು ದಿನಗಳ ಕಾಲ ವಿಶೇಷ ಅಭಿಯಾನ ಪ್ರಕ್ರಿಯೆ ನಡೆದಿದ್ದು ಈ ವಿಶೇಷ ಅಭಿಯಾನ ದಿನಗಳಂದು ಎಲ್ಲ ಬಿಎಲ್ಒಗಳು ತಮ್ಮ ಮತಗಟ್ಟೆಗಳಲ್ಲಿ ಉಪಸ್ಥಿತರಿರುವರು. ಪಟ್ಟಿಯಲ್ಲಿ ತಮ್ಮ ಹೆಸರು ಸೇರ್ಪಡೆಯೂ ಸೇರಿದಂತೆ ಅಗತ್ಯ ಮಾಹಿತಿ ಅವಲೋಕಿಸಿಕೊಂಡು ಇದರ ಸದುಪಯೋಗ ಪಡೆದುಕೊಳ್ಳಬೇಕು ಎಂದು ಜಿಲ್ಲಾಧಿಕಾರಿ ಟಿ.ಭೂಬಾಲನ್ ಅವರು ಸಾರ್ವಜನಿಕರಲ್ಲಿ ಮನವಿ ಮಾಡಿಕೊಂಡಿದ್ದಾರೆ.

ಮತದಾರರ ಪಟ್ಟಿಯ ವಿಶೇಷ ಪರಿಷ್ಕರಣೆಯ ನಿಮಿತ್ಯ ನಗರದ ಟ್ರೇಜರಿ ಕಾಲೋನಿಯ ಮತಗಟ್ಟೆ ಸಂಖ್ಯೆ 40 ರಿಂದ 42ಕ್ಕೆ, ತಿಕೋಟ ತಾಲೂಕಿನ

## ಜಿಲ್ಲಾಧಿಕಾರಿಗಳ ಅನಿರೀಕ್ಷಿತ ಭೇಟಿ: ಮತದಾರರ ಪಟ್ಟಿ ಖುದ್ದು ಪರಿಶೀಲನೆ

ತೊರವಿಯ ಮತಗಟ್ಟೆ ಸಂಖ್ಯೆ 92 ರಿಂದ 97 ಹಾಗೂ ತಾಜಪೂರ ಗ್ರಾಮದಲ್ಲಿ ಬರುವ ಮತಗಟ್ಟೆ ಸಂಖ್ಯೆ 109 ರಿಂದ 112ಕ್ಕೆ ಅನಿರೀಕ್ಷಿತ ಭೇಟಿ ನೀಡಿ, ಪ್ರಗತಿ ಪರಿಶೀಲಿಸಿದರು.ಈ ಸಂದರ್ಭದಲ್ಲಿ ವಿಜಯಪುರದ ಉಪವಿಭಾಗಾಧಿಕಾರಿ ಗುರುನಾಥ ದಡ್ಡೆ, ತಹಶೀಲ್ದಾರರು, ಮತಗಟ್ಟೆ ಅಧಿಕಾರಿಗಳು ಉಪಸ್ಥಿತರಿದ್ದರು.



# ಪ್ಯಾಜೋ ಆಟೋ ಪಲ್ಟಿ: ಮಹಿಳೆ ಸಾವು

■ ಉದಯರಶ್ಮಿ ದಿನಪತ್ರಿಕೆ



ಮುದ್ದೇಬಿಹಾಳ: ಓವರ್‌ಟೇಕ್ ಮಾಡಲು ಹೋಗಿ ಮೂರು ಚಕ್ರದ ಪ್ಯಾಜೋ ಆಟೋವೊಂದು ಪಲ್ಟಿಯಾದ ಪರಿಣಾಮ ಆಟೋದಲ್ಲಿದ್ದ ಮಹಿಳೆಯೊಬ್ಬಳು ಸ್ಥಳದಲ್ಲೇ ಸಾವನ್ನಪ್ಪಿದ್ದು ಹಲವರಿಗೆ ಗಂಭೀರ ಗಾಯಗಳಾದ ಘಟನೆ ತಾಲೂಕಿನ ಅಮರಗೋಳ ಕ್ರಾಸ್ ಬಳಿ ಸಂಭವಿಸಿದೆ.

ಮೃತ ದುರ್ದೈವಿಯನ್ನು ತಾಲೂಕಿನ ಕೊಳೂರು ಗ್ರಾಮದ ಮಾಲನಬಿ ಹವಾಲ್ದಾರ(35) ಎಂದು ಗುರುತಿಸಲಾಗಿದೆ. ಅಟೋದಲ್ಲಿದ್ದ ಕೊಳೂರು ಗ್ರಾಮಸ್ಥರಾದ ವಸಂತಿ ಕತ್ತಿ, ಶರಣಮ್ಮ ಹಗಟಗಿ, ಲಾಲಮಾ ಮತ್ತೇದಾರ, ಬಸಮ್ಮ ತಾರನಾಳ, ಚನ್ನಮ್ಮ ತಂಗಡಗಿ, ನಿಂಗಮ್ಮ ಮಡಿವಾಳರ, ಶಂಕ್ರಮ್ಮ ಪಾಟೀಲ, ರೇಖಾ ಮಡಿವಾಳರ ಇವರಿಗೆ ಗಾಯಗಳಾದ್ದು ಆಸ್ಪತ್ರೆಗೆ ದಾಖಲಿಸಲಾಗಿದೆ. ಘಟನಾ ಸ್ಥಳಕ್ಕೆ ಡಿಎಸ್‌ಪಿ ಬಲ್ಲಪ್ಪ ನಂದಗಾವಿ, ಸಿಪಿಐ ಕಾರ್ಜುನ ತುಳಸಿಗೇರಿ, ಪಿಎಸ್‌ಐ ಸಂಜಯ ತಿಪರೆಡ್ಡಿ, ಕ್ರೈಂ ಪಿಎಸ್‌ಐ ಆರ್.ಎಲ್.ಮನ್ನಾಬಾಯಿ ಮುಖ್ಯ ಪೇದೆಗಳಾದ ಎಂ.ಬಿ.ಹೂಗಾರ, ಎಸ್.ಜಿ.ಬನ್ನೆಟ್ಟಿ ಸಿಬ್ಬಂದಿಗಳಾದ ಬಿ.ಜೆ.ಕಾಸರ, ಮೌಲಾಲಿ ಮೊಕಾಶಿ ಭೇಟಿ ನೀಡಿ ಪರಿಶೀಲಿಸಿ ಶವವನ್ನು ಅಂಬುಲೆನ್ಸ್ ಮೂಲಕ ಮರಣೋತ್ತರ ಪರೀಕ್ಷೆಗೆ ರವಾನಿಸಿದರು.

ಬಾಗಲಕೋಟೆ ಜಿಲ್ಲೆಯ ಕೂಡಲ ಸಂಗಮದ ಬಳಿಯ ಬಿಸಲದಿನ್ನಿ ಗ್ರಾಮದ ಜಮೀನೊಂದರಲ್ಲಿ ಈರುಳ್ಳಿ ಕೀಳುವ ಕೂಲಿ ಕೆಲಸಕ್ಕೆ ಹೋಗುವಾಗ ಟ್ಯಾಂಕರ್ ನ ಓವರ್‌ಟೇಕ್ ಮಾಡಲು ಹೋಗಿ ಅತಿಯಾದ ವೇಗದಲ್ಲಿ ವಾಹನ ಚಲಾಯಿಸಿದ್ದರಿಂದ ಈ ಅಪಘಾತ ಸಂಭವಿಸಿದ್ದು ವಾಹನ ಚಾಲಕನ ನಿರ್ಲಕ್ಷವೇ ಘಟನೆಗೆ ಕಾರಣ ಎಂದು ಇಲ್ಲಿನ ಪೊಲೀಸ್ ಠಾಣೆಯಲ್ಲಿ ಫಿರ್ಯಾದು ನೀಡಿದ ಆಧಾರದ ಮೇಲೆ ಪ್ರಕರಣ ದಾಖಲಾಗಿದೆ.

## ಸಂಚಾರಿ ನಿಯಮಗಳ ಪಾಲನೆಗೆ ಮನವಿ

### ಸಂಚಾರಿ ನಿಯಮಗಳ ಪಾಲನೆಗೆ ಕಸಾಪ ಅಧ್ಯಕ್ಷ ಬಿರಾದಾರ ಮನವಿ

ಘಟನೆಯ ಬಳಿಕ ಕಸಾಪ ಅಧ್ಯಕ್ಷ ಕಾಮರಾಜ ಬಿರಾದಾರ ಮಾಧ್ಯಮದವರೊಂದಿಗೆ ಮಾತನಾಡಿ, ಇಂತಹ ಘಟನೆಗಳಿಗೆ ಸಂಚಾರಿ ನಿಯಮಗಳ ಉಲ್ಲಂಘನೆಯೇ ಮುಖ್ಯ ಕಾರಣ ಎನ್ನುವದನ್ನು ಸಾರ್ವಜನಿಕರು ಅರಿತುಕೊಳ್ಳಬೇಕು. ಮಧ್ಯ ಸೇವಿಸಿ, ಲೈಸನ್ಸ್ ಹೆಲ್ಮೆಟ್ ಇಲ್ಲದೇ ದ್ವಿಚಕ್ರ ಸವಾರಿ ಮಾಡಬಾರದು. ಯಾವುದೇ ತ್ರಿ ಚಕ್ರ, ನಾಲ್ಕು ಚಕ್ರಕ್ಕಿಂತ ಹೆಚ್ಚಿನ ಚಕ್ರಗಳ ವಾಹನಗಳಲ್ಲಿ ಕೂರುವಾಗ ವಾಹನದ ಸುರಕ್ಷತೆ, ಸಂಚಾರಿ ನಿಯಮಗಳನ್ನು ಪಾಲಿಸಲಾಗಿದೆಯೇ ಎಂದು ಗಮನಿಸಿ ಕೂರಬೇಕು. ಗುಂಪಾಗಿ ಹೋಗುವಾಗ ನಿಗಧಿತ ಆಸನಗಳಿಗಿಂತ ಹೆಚ್ಚು ಸಂಖ್ಯೆಯಲ್ಲಿ ಪ್ರಾಯಾಣಿಸಬಾರದು. ಸರ್ಕಾರವೂ ಕೂಡ ಸಂಚಾರಿ ನಿಯಮಗಳನ್ನು ಇನ್ನಷ್ಟು ಕಟ್ಟು ನಿಟ್ಟಾಗಿ ಪಾಲಿಸುವಂತೆ ಕ್ರಮ ಕೈಗೊಳ್ಳಬೇಕು ಎಂದರು.

## ಸಾವನ್ನಪ್ಪಿದ ಮಹಿಳೆ ಕುಟುಂಬಕ್ಕೆ ಸಾಂತ್ವನ :ಧನಸಹಾಯ

ಘಟನೆಯಲ್ಲಿ ಸಾವನ್ನಪ್ಪಿದ ಮಹಿಳೆಗೆ ಪತಿ ಮತ್ತು ಇಬ್ಬರು ಮಕ್ಕಳಿದ್ದು, ಕೂಲಿ ಕಾರ್ಮಿಕ ಮಹಿಳೆಯ ಮೇಲೆ ನಡೆದ ವಿಧಿಯಾಟಕ್ಕೆ ಸಮಾಜ ಸೇವಕ ಸಿ.ಬಿ.ಅಸ್ಕಿ ಮರುಗಿದ್ದಾರೆ. ಘಟನೆಯ ವಿಷಯ ತಿಳಿದು ಸರ್ಕಾರಿ ಆಸ್ಪತ್ರೆಗೆ ದೌಡಾಯಿಸಿ ಮೃತ ಕುಟುಂಬಸ್ಥರಿಗೆ 25 ಸಾವಿರ ರೂಗಳ ಧನ ಸಹಾಯ ಮಾಡಿ ಸಾಂತ್ವನ ಹೇಳಿ ಮಾನವೀಯತೆ ಮೆರೆದಿದ್ದಾರೆ.



# ವ್ಯಕ್ತಿಗೆ ಬೆಂಕಿ ಸೋಕಿ ಗಂಭೀರ ಗಾಯ

■ ಉದಯರಶ್ಮಿ ದಿನಪತ್ರಿಕೆ

ಮುದ್ದೇಬಿಹಾಳ: ಭಕ್ತಿಯಲ್ಲಿ ಮೈಮರೆತ ವಿವಾಹಿತನ ಧೋತರಕ್ಕೆ ಬೆಂಕಿ ಹತ್ತಿ ಗಂಭೀರ ಗಾಯವಾದ ಘಟನೆ ತಾಲೂಕಿನ ಶಿರೋಳ ಗ್ರಾಮದಲ್ಲಿ ನಡೆದಿದೆ.

ಗಾಯಾಳು ಶರಣಗೌಡ ಅಗಸಬಾಳ ಎಂದು ತಿಳಿದು ಬಂದಿದೆ. ಗ್ರಾಮದ ದ್ಯಾಮಣ್ಣ ಮುತ್ಯಾನ ಕಟ್ಟೆಯಲ್ಲಿ ಭಕ್ತರಿಂದ ರವಿವಾರ ದೇವರಿಗೆ ವಿಶೇಷ ಪೂಜೆ ಹಮ್ಮಿಕೊಳ್ಳಲಾಗಿತ್ತು. ಈ ವೇಳೆ ಭಕ್ತಿಯಲ್ಲಿ ಮೈಮರೆತ ಶರಣಗೌಡ ನಮಸ್ಕರಿಸುವ ಸಂದರ್ಭ ಆತನ ಧೋತರಕ್ಕೆ ತಗುಲಿದ ಬೆಂಕಿ ಚಪ್ಪೆ, ಕಾಲು ಮತ್ತು ಕೈಗಳ ಕೆಲ ಭಾಗಕ್ಕೆ ಆವರಿಸಿಕೊಳ್ಳುತ್ತಿದ್ದಂತೆ ಸೇರಿದ್ದ ಜನ ಬೆಂಕಿಯನ್ನು ನಂದಿಸಿ ಆತನನ್ನು ಕೂಡಲೇ ಸರ್ಕಾರಿ ಆಸ್ಪತ್ರೆಗೆ ದಾಖಲಿಸಿದ್ದಾರೆ. ಅದೃಷ್ಟವಶಾತ್ ಗಾಯಾಳು ಪ್ರಾಣಾಪಾಯದಿಂದ ಪಾರಾಗಿದ್ದು, ಗಂಭೀರವಾದ ಗಾಯಗಳಾಗಿರುವದರಿಂದ ತಾಲೂಕು ಸರ್ಕಾರಿ ಆಸ್ಪತ್ರೆಯಲ್ಲಿ ಪ್ರಥಮ ಚಿಕಿತ್ಸೆ ನೀಡಿ ಹೆಚ್ಚಿನ ಚಿಕಿತ್ಸೆಗೆ ಜಿಲ್ಲಾಸ್ಪತ್ರೆಗೆ ರವಾನಿಸಲಾಗಿದೆ ಎಂದು ಮೂಲಗಳು ತಿಳಿಸಿವೆ.

# ಟಿಪ್ಪು ಸುಲ್ತಾನ್ ಜಾತ್ಯತೀತ ವ್ಯಕ್ತಿ :ಜಾವೀದ್ ಮೋಮಿನ್

■ ಉದಯರಶ್ಮಿ ದಿನಪತ್ರಿಕೆ




ಇಂಡಿ: ಸ್ವತಂತ್ರ ಮೊದಲ ಸೇನಾನಿ ಟಿಪ್ಪು ಸುಲ್ತಾನ್, ಅದಲ್ಲದೇ ಟಿಪ್ಪು ಸುಲ್ತಾನ್ ಜಾತ್ಯತೀತ ವ್ಯಕ್ತಿ, ಸ್ವಾತಂತ್ರ್ಯಕ್ಕೆ ಹೋರಾಡಿ ಮೈಸೂರಿನ ಹುಲಿ ಎಂದು ಖ್ಯಾತಿ ಪಡೆದಿದ್ದಾರೆ ಎಂದು ಕಾಂಗ್ರೆಸ್ ಬ್ಲಾಕ್ ಅಧ್ಯಕ್ಷ ಜಾವೀದ್ ಮೋಮಿನ್ ಮಾತನಾಡಿದರು.

ರವಿವಾರ ಪಟ್ಟಣದ ಟಿಪ್ಪು ಸುಲ್ತಾನ್ ವೃತ್ ದಲ್ಲಿ ಯೂಥ್ ಕವರೇಜ್ ಅಸೋಸಿಯೇಷನ್ ಆಶ್ರಯದಲ್ಲಿ ಜರುಗಿದ ಟಿಪ್ಪು ಸುಲ್ತಾನ್ 274 ನೇ ಜಯಂತಿ ಅಂಗವಾಗಿ ಏರ್ಪಡಿಸಿರುವ ರಕ್ತದಾನ ಶಿಬಿರದಲ್ಲಿ ಮಾತನಾಡಿದರು.

ಅವರನ್ನುಒಂದುಧರ್ಮದಆಧಾರದ ಮೇಲೆ ನೋಡಿ ತಾರತಮ್ಯ ಮಾಡಬಾರದು. ಏನೇ ಭಿನ್ನಾಭಿಪ್ರಾಯಗಳಿದ್ದರೂ ಬದಿಗೊತ್ತಿ ವ್ಯಕ್ತಿತ್ವ, ಅವರ ತ್ಯಾಗ ಬಲಿದಾನ ವನ್ನು ಸ್ಮರಿಸಬೇಕಿದೆ. ಟಿಪ್ಪು ಸುಲ್ತಾನ್ ದೇಶಕ್ಕಾಗಿ ತನ್ನ ಮಕ್ಕಳನ್ನು ಬ್ರಿಟಿಷರಲ್ಲಿ ಒತ್ತೆ ಇಟ್ಟು ಹೋರಾಡಿದ ವೀರ. ಅಂತಹ ವೀರ ಸೇನಾನಿಯ ಜಯಂತಿಯನ್ನು ಮಾಡಬೇಕಾದದ್ದು ಸರ್ಕಾರದ ಕರ್ತವ್ಯ. ಆದರೆ, ಕೋಮುವಾದಿ ಬಿಜೆಪಿ ಸರ್ಕಾರ ಟಿಪ್ಪು ಸುಲ್ತಾನ ದೇಶಭಕ್ತಿಯನ್ನು ಮರೆಮಾಚಲು ಪ್ರಯತ್ನಿಸುತ್ತಿರುವುದು ಖಂಡನೀಯ. ಟಿಪ್ಪು ಸುಲ್ತಾನ್ ಸೌಹಾರ್ದ ಆಡಳಿತ, ಶೂರತನ ಎಂದಿಗೂ ಅಮರ ಎಂದು ಹೇಳಿದರು.

ಶಾಂತಿ ಸಮಾಜ ಸೇವಾ ಸಂಘದ ಅಧ್ಯಕ್ಷ ಅಯೂಬ್ ನಾಟೀಕಾರ ಮಾತನಾಡಿ, ನಮ್ಮೆಲ್ಲರಿಗೂ ಅತೀ ಹೆಮ್ಮೆಯ ವಿಚಾರ ಅಂದರೆ ಟಿಪ್ಪು ಸುಲ್ತಾನ್ ಕರ್ನಾಟಕದವರು, ಕನ್ನಡದವರು. ಆದರೆ, ದೊರೆ ಟಿಪ್ಪುವಿನ ಕೊಡುಗೆ ಕೇವಲ ಕನ್ನಡಕ್ಕೆ ಮತ್ತು ಕರ್ನಾಟಕಕ್ಕೆ ಸೀಮಿತವಲ್ಲ. ಯಾಕೆ ಅಂದರೆ ಬ್ರಿಟಿಷರು ಹೆದರುತ್ತಿದ್ದ ಬೆಚ್ಚಿ ಬೀಳುತ್ತಿದ್ದ ನಮ್ಮ ದೇಶದ ಏಕೈಕ ದೊರೆ ಹಜರತ್ ಟಿಪ್ಪು ಸುಲ್ತಾನ್. ಕನ್ನಡದೇ ನೆಲದಲ್ಲೇ ಹುಟ್ಟಿ ಕನ್ನಡದ ನೆಲದಲ್ಲೇ ತನ್ನ ನೆತ್ತರು ಹರಿಸಿದವರು ಟಿಪ್ಪು ಸುಲ್ತಾನ್. ಬ್ರಿಟಿಷರು ಎಷ್ಟೇ ಕಾಡಿದರೂ ಬೆದರದ ದೊರೆ ಟಿಪ್ಪು ಸುಲ್ತಾನ್ ಎಂದು ಹೇಳಿದರು.

ಇನ್ನೂ ಪುರಸಭೆ ಅಧ್ಯಕ್ಷ ಲಿಂಬಾಜಿ ರಾಠೋಡ, ಮೌಲಾನಾ ಸದ್ದಾಂ ಮಾತನಾಡಿದರು.

ಈ ಸಂದರ್ಭದಲ್ಲಿ ಮುಫ್ತಿ ಅಬ್ದುಲ್ ರಹಮಾನ್, ಯೂಥ ಕವರೇಜ ಅಧ್ಯಕ್ಷ ಜಾಕೀರ ಮಲಘಾನ, ಉಪಾಧ್ಯಕ್ಷ ಮೌಲಾನಾ ಸಮೀರ, ಕಾರ್ಯದರ್ಶಿ ಮುಜಮಿಲ್ಲ ಬಾಗವಾನ, ಅಂಜುಮನ ಅಧ್ಯಕ್ಷ ಮುನ್ನಾ ಬಾಗವಾನಪುರಸಭೆ ಸದಸ್ಯ ಸುಧೀರ ಕರಕಟ್ಟಿ, ಬಾಗವಾನ , ಇಸ್ಮಾಯಿಲ ಅರಬ, ಇಲಿಯಾಸ ಮಾಣಿಕ, ಪತ್ರಕರ್ತ ಫಯಾಜಅಹ್ಮದ ಬಾಗವಾನ , ಫಾರೂಕ ಬಿಸನಾಳ ಶೌಕತ ಖಾಜಿ ,ಏಜಾಜ ಮುನಶಿ, ಮುಜಪರ ಬಾಗವಾನ, ವಶೀಮ ಖಾಜಿ, ನಿಸಾರ ಬಳ್ಳಾರಿ, ದಾವೂದ ಶೇಖ, ಉಪಸ್ಥಿತರಿದ್ದರು.

# ಹತ್ತಿಯ ಗುಲಾಬಿ ಕಾಯಿಕೊರಕ ಹುಳುವಿನ ನಿರ್ವಹಣೆ- ಯನಗುಂದಾ ಗ್ರಾಮದಲ್ಲಿ ಕ್ಷೇತ್ರೋತ್ಸವ



ಔರಾದ್ : ಕೃಷಿ ವಿಜ್ಞಾನ ಕೇಂದ್ರ ಬೀದರ ವತಿಯಿಂದ 2024ರ ನವೆಂಬರ್ 8ರಂದು ಔರಾದ ತಾಲೂಕಿನ ಯನಗುಂದಾ ಗ್ರಾಮದಲ್ಲಿ ಹತ್ತಿಯ ಗುಲಾಬಿ ಕಾಯಿಕೊರಕ ಹುಳುವಿನ ನಿರ್ವಹಣೆಯ ಕ್ಷೇತ್ರೋತ್ಸವ ವನ್ನು ಆಚರಿಸಲಾಯಿತು.ಗ್ರಾಮದ ಪ್ರಗತಿ ಪರ ರೈತರಾದ ಗೋಪಾಲ ರೆಡ್ಡಿ ಮಾತನಾಡಿ ಸಕಾಲಿಕ ಮಾಹಿತಿ ರೈತರಿಗೆ ದೊರೆಯುವುದರಿಂದ ಪೀಡೆ ನಿರ್ವಹಣೆ ಖರ್ಚು ಕಡಿಮೆಯಾಗಿ ರೈತರಿಗೆ ಅನುಕೂಲವಾಗಲಿದೆ ಎಂದರು . ಶ್ರೀ ವಿಠಲ ರೆಡ್ಡಿ ಮಾತನಾಡಿ ಪಿ.ಬಿ.ಡ್ಬ್ಲ್ಯು ಜೆಲ್ ರೈತರು ಸಾಮೂಹಿಕವಾಗಿ ಬಳಸಿದ್ದಲ್ಲಿ ಹತ್ತಿಯ ಗುಲಾಬಿ ಕಾಯಿಕೊರಕದ ನಿರ್ವಹಣೆ ಪರಿಣಾಮಕಾರಿಯಾಗಲಿದೆ ಎಂದರು. ಕೃಷಿ ವಿಜ್ಞಾನ ಕೇಂದ್ರದ ವಿಜ್ಞಾನಿ ಡಾ.ಜ್ಞಾನದೇವ ಬುಳ್ಳಾ ಹತ್ತಿಯ ಉತ್ಪಾದನೆಯಲ್ಲಿ ಬೇಸಾಯ ಕ್ರಮಗಳು, ಎಲೆಗಳ ಕೆಂಪಾಗುವಿಕೆಗೆ ಕಾರಣ ಮತ್ತು ನಿರ್ವಹಣೆ ಕುರಿತು ಮಾಹಿತಿ ನೀಡಿದರು. ಕೃಷಿ ವಿಜ್ಞಾನ ಕೇಂದ್ರ ಬೀದರನ ಹಿರಿಯ ವಿಜ್ಞಾನಿ ಹಾಗೂ ಮುಖ್ಯಸ್ಥರಾದ ಡಾ. ಸುನೀಲ ಕುಮಾರ್ ಎನ್.ಎಮ್ ಹತ್ತಿಯ ಗುಲಾಬಿ ಕಾಯಿಕೊರಕದ ನಿರ್ವಹಣೆಯಲ್ಲಿ ಕೀಟಗಳ ಸಂಯೋಗ ತಡೆ ತಂತ್ರಜ್ಞಾನದ ಮೂಲಕ ಹುಳು ನಿರ್ವಹಣೆಯ ಉತ್ತಮ ಕ್ರಮಗಳು ಹಾಗು ಬಳಸುವ ಕ್ರಮಗಳ ಕುರಿತು ಮತ್ತು ಸಮಗ್ರ ಕೀಟ ನಿರ್ವಹಣೆಯಲ್ಲಿ ಈ ಯಂತ್ರಜ್ಞಾನದ ಮಹತ್ವದ ಕುರಿತು ತಿಳಿಸಿದರು. ಇದಲ್ಲದೆ ರೈತರಿಗೆ ಕೀಟನಾಶಕಗಳನ್ನು ಅಗತ್ಯಕ್ಕೆ ತಕ್ಕಂತೆ ಮತ್ತು ಆರ್ಥಿಕ ನಷ್ಟರೇಖೆ ಅಂಚಿನ ಆಧಾರದ ಮೇಲೆ ಮಾತ್ರ ಸಿಂಪಡಿಸುವಂತೆ ಸಲಹೆ ನೀಡಿ, ಕ್ಯಾಲೆಂಡರ್ ಆಧಾರಿತ ಸಿಂಪರಣೆ ಮಾಡದಿರಲು ಸಲಹೆ ನೀಡಿದರು. ನಂತರ ರೈತರು ಕೀಟ ಮತ್ತು ರೋಗಗಳ ಬಗ್ಗೆ ಪ್ರಶ್ನೆಗಳನ್ನು ಕೇಳಿದರು, ತಜ್ಞರು ಅವಶ್ಯಕತೆ ಆಧಾರಿತ ಕ್ರಮಗಳನ್ನು ಅನುಸರಿಸುವಂತೆ ಸಲಹೆ ನೀಡಿದರು.

**Printed by:** AVINASH BIDARI, **Published and owned by:** SHAILA INDUSHEKHAR MANUR **Printed at:** ARUN OFFSET PRINTERS,No.23, Sanjaygandhi Nagar, Indi Road, Vijayapura - 586101, Vijayapura Dist., Karnataka. **Published at:** At No.14, Silk City, Near Varasiddi Vinayaka Temple, Atalatti Link Road, Vijayapura -586102, Vijayapura Dist., Karnataka..**Editor :** INDUSHEKHAR MANUR